# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA
Email: hampitimes@gmail.com | M:94486 33038

HAMPI TIMES No.1 Leading Local News Paper
90,000 E-PAPER READERS
94486 33038 NEWS PAPER ADD - THE BEST ADVERTISING PLATFORM TO BOOST YOUR BUSINESS
E-mail: hampitimes@gmail.com | # Valmiki Circle hospet-583201

ಸಂಪುಟ:02 • ಸಂಚಿಕೆ: 87 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 29.09.2024 • ಭಾನುವಾರ • ಪುಟ:04 • ಬೆಲೆ:2
Volume:02 • Issue: 87 • PRGI No:KARKAN/2023/88055 • VIJAYANAGARA • 29.09.2024 • Sunday • Page:04 • Rs:2





ಹಂಪಿ ಟೈಮ್ಸ್ HAMPI TIMES

ಹಂಪಿ ಟೈಮ್ಸ್ ಸಂ|ಪಾ|ದ|ಕೀ|ಯ

## ಮುಖ್ಯಮಂತ್ರಿ ಸಿದ್ದರಾಮಯ್ಯ ಜಿಲ್ಲೆಗೆ ಬಂದು ಹೋದರೇನು ಪ್ರಯೋಜನ?



ರಾಜ್ಯದಲ್ಲಿ ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯ ಅಧಿಕಾರ ವಹಿಸಿಕೊಂಡ ಮೇಲೆ ವಿಜಯನಗರ ಜಿಲ್ಲೆಗೆ ಸಾಕಷ್ಟು ಬಾರಿ ಬಂದು ಹೋಗಿದ್ದಾರೆ. ಬಹುಶ ಕಳೆದ ವಾರ ತುಂಗಭದ್ರ ಜಲಾಶಯಕ್ಕೆ ಬಾಗಿನ ಸಮರ್ಪಣೆ ಕಾರ್ಯಕ್ರಮ ಏಳನೇ ಭೇಟಿ ಆಗಿರಬಹುದು. ಇಷ್ಟು ಬಾರಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿಜಯನಗರ ಜಿಲ್ಲೆಗೆ ಭೇಟಿ ನೀಡಿದರೂ ಜಿಲ್ಲೆಗೆ ಆಗಿರುವ ಪ್ರಯೋಜನವೂ ಅಷ್ಟಕ್ಕಷ್ಟೇ. ಯಾವುದೇ ಮುಖ್ಯಮಂತ್ರಿ ಜಿಲ್ಲೆಗೆ ಬಂದು ಹೋದರೆ ಏನೂ ಘೋಷಣೆ ಹೊರಬೀಳದಿದ್ದರೂ ಕನಿಷ್ಠ ಪಕ್ಷ ಅವರು ಬಂದುಹೋಗುವ ದಾರಿಯಲ್ಲಿ, ಅಂದರೆ ಮಾರ್ಗದಲ್ಲಿ ರಸ್ತೆಗಳಾದರೂ ಸುಧಾರಣೆ ಕಾಣುತ್ತಿದ್ದವು. ಮುಖ್ಯಮಂತ್ರಿ ಸಿದ್ದರಾಮಯ್ಯ ಏಳು ಬಾರಿ ಇಲ್ಲಿಗೆ, ಅಂದರೆ ವಿಜಯನಗರ ಜಿಲ್ಲೆಗೆ ಬಂದು ಹೋದರೂ ರಸ್ತೆಗಳು ಮಾತ್ರ ಯಥಾಸ್ಥಿತಿಯಲ್ಲಿವೆ. ಇನ್ನು ಹೊಸ ಘೋಷಣೆಯಾಗಲಿ, ಹೊಸ ಯೋಜನೆಯಾಗಲಿ, ಹೊಸ ಅನುದಾನವಾಗಲಿ ಕೇಳಿ ಬರಲಿಲ್ಲ. ಕನಿಷ್ಠಪಕ್ಷ ಹಳೆಯ ಯೋಜನೆಗಳಾದರೂ ಮುಗಿದಿಲ್ಲ. ಹೋಗಲಿ, ಹಳೆಯ ಯೋಜನೆಗಳಿಗೆ, ಜನಪರಕಾರ್ಯಕ್ರಮಗಳಿಗಾದರೂ ವೇಗ ಸಿಕ್ಕಿಲ್ಲ. ಅನಂತಶನಯಗುಡಿ ಬಳಿ ರೈಲ್ವೆ ಮಾರ್ಗಕ್ಕೆ ಅಡ್ಡಲಾಗಿ ನಿರ್ಮಿಸಲಾಗುತ್ತಿರುವ ಮೇಲು ಸೇತುವೆ ಕಾಮಗಾರಿ ಆಮೆವೇಗದಲ್ಲಿದೆ. ಅದಿನ್ನು ಯಾವಾಗ ಮುಗಿಯುತ್ತದೆಯೋ ಎಂಬ ಬೇಸರದಲ್ಲಿದ್ದಾರೆ ಪ್ರಯಾಣಿಕರು ಮತ್ತು ಸವಾರರು. ಗೇಟ್ ಹಾಕಿದರೆ ಸಾಕು ಸಾಲುಗಟ್ಟಿ ನಿಲ್ಲುವ ವಾಹನಗಳ ನಡುವೆ ಅಲ್ಲಿಂದ ಪಾರಾಗುವುದು ಸಹ ಅಷ್ಟೇ ಕಷ್ಟದ ಕೆಲಸ. ಮೇಲಾಗಿ ಗೇಟ್ ಬಹಳ ಚಿಕ್ಕದಿರುವುದರಿಂದ ಎರಡು ಸಾಲಿನಲ್ಲಿ ವಾಹನಗಳು ಹೋಗಿ ಬರುವುದು ಕಷ್ಟದ ಕೆಲಸವಾಗಿದೆ. ಸೇತುವೆ ಕಾಮಗಾರಿ ವೇಗ ನೋಡಿದರೆ ಇನ್ನಷ್ಟು ವರ್ಷ ಹೀಗೇ ಕಿರಿಕಿರಿ ಅನುಭವಿಸುವುದು ಅನಿವಾರ್ಯ ಎಂಬಂತಾಗಿದೆ. ಈ ವಿಷಯ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಗೊತ್ತಿಲ್ಲವೆಂದೇನಿಲ್ಲ. ಅವರದೇ ಪಕ್ಷದ ಶಾಸಕ ಇಲ್ಲಿದ್ದರೂ ಕಾಮಗಾರಿಗೆ ವೇಗ ಸಿಗುವ ಲಕ್ಷಣಗಳು ಕಾಣುತ್ತಿಲ್ಲ. ಇನ್ನು ಕಬ್ಬಿನ ಬೆಳೆಗಾರರ ಸಮಸ್ಯೆ ಕೇಳೋರೋ ಇಲ್ಲವಾಗಿದೆ. ಈ ಭಾಗದಲ್ಲಿ ಕಬ್ಬಿನ ಬೆಳೆ ಹೆಚ್ಚಾಗೇ ಬೆಳೆಯಲಾಗುತ್ತಿದೆ. ಬೆಳೆಗಾರರು ಇವೆಲ್ಲವನ್ನು ದೂರದ ಜಿಲ್ಲೆಗಳಿಗೆ ಸಾಗಿಸಬೇಕಿದೆ. ಜಿಲ್ಲೆಯಲ್ಲೇ, ಅದರಲ್ಲೂ ಹೊಸಪೇಟೆಯಲ್ಲೇ ಇದ್ದ ಸಕ್ಕರೆ ಕಾರ್ಖಾನೆ ಮುಚ್ಚಿಹೋಗಿದೆ. ಇದರಿಂದ ಈಗಾಗಲೇ ರೈತರು ಸಾಕಷ್ಟು ಒದ್ದಾಡಿದ್ದಾರೆ. ಸಮಸ್ಯೆ ಒಂದು ಹಂತಕ್ಕೆ ಸರಿಹೋಗಿ, ಹೊಸ ಸಕ್ಕರೆ ಕಾರ್ಖಾನೆ ಶುರುವಾಗಲಿದೆ ಎಂಬಷ್ಟರಲ್ಲೇ ರಾಜಕೀಯ ವಿಷಯ ಇದರಲ್ಲಿ ನುಸುಳಿದೆ. ಇಲ್ಲಿಗೆ ಸಕ್ಕರೆ ಕಾರ್ಖಾನೆ ಸಮಸ್ಯೆಯೂ ಜೀವಂತವಾಗಿದೆ. ಸಮಸ್ಯೆ ಬಗೆಹರಿಬೇಕೆಂದರೆ ಇನ್ನೂ ಹಲವು ವರ್ಷ ಕಾಯಬೇಕು. ಆದರೂ, ಸಮಸ್ಯೆ ಬಗೆಹರಿಲಿದೆ ಎಂಬ ವಿಶ್ವಾಸ ಕಬ್ಬು ಬೆಳೆಗಾರರಲ್ಲಿ ಕಾಣುತ್ತಿಲ್ಲ. ಇಂಥ ಹತ್ತು ಹಲವು ಗಂಭೀರ ಸ್ವರೂಪದ ಮತ್ತು ಜ್ವಲಂತ ಸಮಸ್ಯೆಗಳು ಜಿಲ್ಲೆಯಲ್ಲಿವೆ. ಆದರೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಏಳು ಬಾರಿ ಇಲ್ಲಿಗೆ ಬಂದು ಹೋದರೂ ಯಾವ ಸಮಸ್ಯೆಗಳು ಮುಕ್ತಿ ಕಾಣುತ್ತಿಲ್ಲ. ಜಿಲ್ಲೆಯ ಜನರ ಸಮಸ್ಯೆಗಳಿಗೆ ಮುಕ್ತಿ ಕಾಣಬೇಕಾದರೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅದೆಷ್ಟು ಬಾರಿ ಜಿಲ್ಲೆಗೆ ಬರಬೇಕೋ ಕಾದು ನೋಡಬೇಕು.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ-ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ.
ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

(ಪ್ರತಿಯೊಂದು ಮಗುವೂ ಕಲಿಯಲೇಬೇಕಾದ ಅಗತ್ಯ ಆಧುನಿಕ ಸೂಕ್ಷ್ಮತೆಗಳು...)

# ಹದ್ದು ಮೀರುವ ಮೊದಲು...

ಏಟು ಓದಿಕೊಂಡರ ಏನು ಬಿಡು, ಸ್ವಲ್ಪಾದ್ರು ಸೊನ್ನಿ... ಸೂಕ್ಷ್ಮ...ಬ್ಯಾಡ್ವೆ" ಎನ್ನುವಂತಹ ಮಾತನ್ನು ಆಗಾಗ ನಮ್ಮ ನಮ್ಮ ಮನೆಗಳಲ್ಲಿ ಕೇಳಿರುತ್ತೇವೆ. ಅದರಲ್ಲೂ ಹಿರಿಯರಿದ್ದ ಮನೆಗಳಲ್ಲಂತೂ ಪ್ರತಿನಿತ್ಯ ಒಂದೆರೆಡು ಬಾರಿ ಕೇಳುವ ಸಾಧ್ಯತೆ ಇದ್ದೇ ಇರುತ್ತದೆ ಎಂದರೆ ತಪ್ಪಾಗಲಿಕ್ಕಿಲ್ಲ. ಪ್ರತಿಯೊಬ್ಬ ಪೋಷಕರು ತಮ್ಮ ಮಗುವಿಗೆ ಕಲಿಸಬೇಕಾದ ಅಗತ್ಯ ಅನಿವಾರ್ಯವಾದ ಅಂಶಗಳಿವು. ಓಡುತ್ತಿರುವ ಬದುಕಿನ ಬಂಡಿಯಲ್ಲಿ, ಹೊಂದಾಣಿಕೆಯ ಅನಿವಾರ್ಯತೆ ಇರುವ ನಿತ್ಯ ಜೀವನದಲ್ಲಿ ಕೆಲ ಅವಶ್ಯಕ ಅಗತ್ಯಗಳನ್ನೂ ಮರೆತು ಬಿಡುತ್ತೇವೆ, ಸೋಜಿಗ ಎಂದರೆ ಯಾವುದನ್ನು ಪಡೆದುಕೊಳ್ಳಲು ನಾವು ಇಷ್ಟೆಲ್ಲ ಅವಿರತ ಪ್ರಯತ್ನ ಮಾಡುತ್ತೇವೆಯೋ ಅದರ ಪರಿಣಾಮದ ಅರಿವೇ ಇಲ್ಲದೆ ಓಡುತ್ತಿರುತ್ತೇವೆ.

ಸರಿ ಹಾಗಾದರೆ ಈ ಸೊನ್ನಿ ಮತ್ತು ಸೂಕ್ಷ್ಮತೆ ಎಂದರೆ..? ಅದೆ ನೀವೆಲ್ಲ ನಿಮ್ಮ ಮನಸ್ಸಿನಲ್ಲಿ ಅಂದುಕೊಂಡಿರುವುದೇ ಆಗಾಗ ನೀವೂ ನಿಮ್ಮ ಮನೆಗಳಲ್ಲಿ ಕೇಳಿರುವಂತಹ, ಸಾರ್ವಜನಿಕ ಸಭೆ ಸಮಾರಂಭಗಳಲ್ಲಿ ಇತರರಿಂದ ನಿರೀಕ್ಷೆ ಮಾಡುವಂತಹ ಸಾಮಾನ್ಯ ತಿಳುವಳಿಕೆಗಳೇ ಈ ಸೊನ್ನಿ ಸೂಕ್ಷ್ಮತೆಗಳು.

ಹೌದು ನಾವು ಎಷ್ಟೆ ಓದಿಕೊಂಡಿದ್ದರೂ, ಎಂತಹದ್ದೇ ಹುದ್ದೆಯನ್ನು ಅಲಂಕರಿಸಿದ್ದರು, ಕೆಲ ಸಾಮಾನ್ಯವಾದ ವರ್ತನೆಗಳನ್ನು ಕಲಿಯದಿದ್ದರೆ ಅದು ನಮಗೆ ಮತ್ತು ನಾವು ಅಲಂಕರಿಸಿರುವ ಹುದ್ದೆಗೆ ಅದರಲ್ಲೂ ವಿಶೇಷವಾಗಿ ನಾವುಗಳು ಓದಿಕೊಂಡಿರುವ ವಿದ್ಯೆಗೆ ಶೋಭೆ ತರುವಂತದ್ದಲ್ಲ. ಹಾಗೆಯೇ ಇಂತಹ ಅಗತ್ಯವಾದ ಯಾವುದೇ ಗುಣಗಳನ್ನು ನಾವಾಗಲಿ ನಮ್ಮ ವ್ಯವಸ್ಥೆಯಾಗಲಿ ನಮ್ಮ ಮಕ್ಕಳಿಗೆ ಕಲಿಸುವುದನ್ನು ಮರೆತೇ ಬಿಟ್ಟಿದ್ದೇವೆ ಎನ್ನಿಸುತ್ತದೆ. ಇದರಿಂದಾಗಿ ಆಗಾಗ ಹಲವಾರು ಸನ್ನಿವೇಶಗಳಲ್ಲಿ ಮುಜುಗರಕ್ಕೆ ಒಳಗಾಗುತ್ತೇವೆ, ಅಪಹಾಸ್ಯಕ್ಕೆಗುರಿಯಾಗುತ್ತೇವೆ ನಮ್ಮ ತಾಳ್ಮೆಯನ್ನು ಕಳುದುಕೊಳ್ಳುತ್ತೇವೆ ಮತ್ತು ಇಂತಹ ಘಟನೆಗಳಿಂದ ಸಾರ್ವಜನಿಕವಾಗಿ ಅವಮಾನ ಅನುಭವಿಸಿ, ವೈಯಕ್ತಿಕವಾಗಿ ಖಿನ್ನತೆಗೆ ಒಳಗಾಗುತ್ತೇವೆ.



ಜಿ ಶಿವಕುಮಾರ್ ಸೋಗಿ
ಲೇಖಕರು, ಕಾರವಾರ ಕೈಗಾ

Scan For Digital Colourful
HAMPI TIMES E-paper

ಬಹುಪಾಲು ಪೋಷಕರ ಅತಿ ಸಾಮಾನ್ಯ ಫಿರ್ಯಾದಿ ಎಂದರೆ ಯಾಕೋ ನಮ್ಮ ಮಕ್ಕಳು ಅತಿಯಾಗಿ ಆಡುತ್ತವೆ, ಕೆಲವೊಮ್ಮೆಯಂತೂ ಹದ್ದುಮೀರಿ ನೆಡೆದುಕೊಳ್ಳುತ್ತಾರೆ. ಹೌದು ಇದರಲ್ಲಿ ನಾವು ಒಬ್ಬರಾಗಿರುತ್ತೆವೆ ಮತ್ತು ನಮ್ಮ ವರ್ತನೆಗಳೂ ಸಹ ಒಮ್ಮೊಮ್ಮೆ ಹದ್ದು ಮೀರಿರು ತ್ತವೆ. ಕಾರಣ ಇಷ್ಟೆ

1. ನಾವು ಕಲಿತಿಲ್ಲ ಮತ್ತು ನಾವು ಕಲಿಸಲು ಪ್ರಯತ್ನ ಮಾಡುತ್ತಿಲ್ಲ.
2. ನಾವು ಕಲಿತು ಮರೆತಿದ್ದೇವೆ ಮತ್ತು ಕಲಿಸಲು ಸಮಯವಿಲ್ಲ.
3. ನಮಗೆ ಅದರ ಅಗತ್ಯವಿಲ್ಲ ಆದರೆ ಮಕ್ಕಳು ಕಲಿಯಲೇಬೇಕೆನ್ನುವ ಧೋರಣೆ.



ಇಂದಿನ ಮಕ್ಕಳು ಅತಿಯಾಗಿ ಆಡುತ್ತವೆ, ಯುವಜನತೆ ಹದ್ದು ಮೀರಿ ನೆಡೆದುಕೊಳ್ಳುತ್ತಿದ್ದೆ, ಇವರಿಗೆಲ್ಲ ಸೊನ್ನಿ, ಸೂಕ್ಷ್ಮತೆಗಳಿಲ್ಲ ಎನ್ನುವವರು ಈ ಮೇಲಿನ ಮೂರು ಕಾರಣಗಳಲ್ಲಿ ಯಾವುದಾದರು ಒಂದು ಯಾವತ್ತಾದರು ಒಮ್ಮೆ ನಿಮ್ಮದಾಗಿರುತ್ತದೆ ಮತ್ತು ಅದರಿಂದಾಗಿ ಇಂದಿನ ಮಕ್ಕಳು ಹದ್ದು ಮೀರಿದ ವರ್ತನೆಗಳನ್ನು ಆಗಾಗ ಪ್ರದರ್ಶನ ಮಾಡುತ್ತಿರುತ್ತಾರೆ ಎನ್ನುವುದು ಸ್ಪಷ್ಟವಾಗುತ್ತದೆ.

ಸರಿ ಹಾಗಾದರೆ ಪ್ರತಿಯೊಂದು ಮಗುವೂ ಕಲಿಯಲೇಬೇಕಾದ ಅಗತ್ಯ ಆಧುನಿಕ ಸೂಕ್ಷ್ಮತೆಗಳು... ಯಾವವು? ಅವುಗಳನ್ನು ಹೇಗೆ ನಮ್ಮ ಮಕ್ಕಳಲ್ಲಿ ಬೆಳಸಬೇಕು ಎನ್ನುವುದರ ಕಡೆಗೆ ಗಮನ ಕೊಡುವುದಾದರೆ, ಒಂದು ಮಾತು ಸ್ಪಷ್ಟ ಆಧುನಿಕ ವ್ಯವಸ್ಥೆಯಲ್ಲಿ, ಬದಲಾದ ಸನ್ನಿವೇಷದಲ್ಲಿ ಕಲಿಕೆಗೆ ಪೂರಕ ವಾತಾವರಣ, ಪ್ರೇರಕ ಅಂಶಗಳು, ಅಗತ್ಯ ಪರಿಕರಗಳು ಯಥೇಚ್ಛವಾಗಿ ಲಭ್ಯವಿರುವುದರಿಂದ ಇಂದಿನ ಮಕ್ಕಳ ಕಲಿಕೆ ಹಿಂದಿಗಿಂತಲೂ ವೇಗ ಮತ್ತು ನಿಖರವಾಗಿರುತ್ತದೆ ಎನ್ನುವುದರಲ್ಲಿ ಯಾವುದೇ ಅನುಮಾನವಿಲ್ಲ. ಆದರೆ ಶಿಕ್ಷಣ ಕಲಿಸುವ ನಾವು ಶಿಕ್ಷಣದ ಮೂಲ ಗುರಿ ಮತ್ತು ಉದ್ದೇಶಗಳನ್ನು ಮರೆಯಬಾರದಲ್ಲವೆ?

ಶಿಕ್ಷಣ ಎಂದರೆ ನಮಗೆಲ್ಲ ಗೊತ್ತಿರುವಂತೆ ಇದೊಂದು ಮುಗಿಯದ ಪ್ರಕ್ರಿಯೆ. ಶಿಕ್ಷಣದ ಬಹುಮುಖ್ಯ ಗುರಿ ಎಂದರೆ ಅದು "ಮಗುವಿನ ಸಮಗ್ರ ಬೆಳವಣಿಗೆಯನ್ನು ಉತ್ತೇಜಿಸುವಂತದ್ದು. ಅದು ಮಗುವಿನ ಭವಿಷ್ಯದ ಜೀವನದಲ್ಲಿ ಅವನು ಬದುಕುವಂತಹ ಉತ್ತಮ ಮತ್ತು ಸಮೃದ್ಧ ಜೀವನದ ಮಟ್ಟದಲ್ಲಿ ಪ್ರತಿಬಿಂಬಿತವಾಗುತ್ತವೆ. ಮಕ್ಕಳನ್ನು ಉತ್ತಮ ನಾಗರಿಕರನ್ನಾಗಿ ರೂಪಿಸುವುದು ಶಿಕ್ಷಣದ ಪ್ರಮುಖ ಗುರಿಯಾಗಿದೆ. ಆದುದ್ದರಿಂದ ಈ ರೀತಿಯ ಗುರಿಗಳು ಕೇವಲ ಅಂಕಗಳ ದೃಷ್ಟಿಯಿಂದ ಕಲಿಯುವ ಶಿಕ್ಷಣದಿಂದ ಸಾಧ್ಯವಾಗುವುದಿಲ್ಲ. ಬದಲಿಗೆ ಮನೆಯಿಂದ,ಶಾಲೆಯಿಂದ, ಸಮಾಜದಿಂದ, ಸ್ವಂತ ಅನುಭವದಿಂದ ಸಾಧ್ಯವಾಗಿಸಬಹುದಾಗಿದೆ. ಈ ರೀತಿಯಾಗಿ ಸಮಾಜ, ಶಿಕ್ಷಕ, ಪೋಷಕರು ಒಟ್ಟಾಗಿ ಶ್ರಮಿಸಿದರೆ ಮಾತ್ರ ಮಕ್ಕಳ ಹದ್ದು ಮೀರಿದ ವರ್ತನೆಗಳನ್ನು ನಿಯಂತ್ರಿಸಬಹುದು. ಅದಕ್ಕಾಗಿ,

1. ಮಕ್ಕಳಿಗೆ ಸಣ್ಣ ಸಣ್ಣ ವಯಸ್ಸಿನಲ್ಲಿ ಯಾವುದೇ ವಿಷಯಗಳನ್ನು ಕಲಿಸುವಾಗ ಸ್ಪಷ್ಟತೆ ಮತ್ತು ನೇರವಾದ, ಸರಳ ಭಾಷೆಯನ್ನು ಬಳಸಬೇಕು. ಇದು ಅವರಿಗೆ ಸುಲಭವಾಗಿ ನೀವು ಹೇಳುವಂತಹ ವಿಷಯವನ್ನು ಅರ್ಥ ಮಾಡಿಕೊಳ್ಳಲು ಸಹಾಯ ಮಾಡುತ್ತದೆ.

2. ಆಧುನಿಕ ಮಕ್ಕಳು ಎಲ್ಲವನ್ನೂ ಬೇಗ ಕಲಿಯುತ್ತಾರೆ ಮತ್ತು ಬಹುಬೇಗ ಅದನ್ನು ಅಳವಡಿಸಿಕೊಳ್ಳುತ್ತಾರೆ. ಹಾಗಾಗಿ ಎಲ್ಲವನ್ನೂ ಕಲಿಯುವ ನಮ್ಮ ಮಕ್ಕಳಿಗೆ ಒಳ್ಳೆಯದು ಯಾವುದು, ಕೆಟ್ಟದ್ದು ಯಾವುದು ಎನ್ನುವುದನ್ನು ತಿಳಿಸಿಕೊಡುವುದು ಪೋಷಕರಾದ ನಮ್ಮೆಲ್ಲರ ಜವಾಬ್ದಾರಿ. ಸ್ಪಷ್ಟ ಭಾಷೆ, ಪದ ಬಳಕೆ, ಸಕಾರಾತ್ಮಕ ನಡವಳಿಕೆ, ಮುಕ್ತ ಸಂವಹನ, ಸಹಾಯ ಮಾಡುವ ಗುಣ ಮತ್ತು ಈ ಕೌಶಲ್ಯಗಳು ಅವರ ಸರ್ವೋತುಮುಖ ಅಭಿವೃದ್ಧಿಗೆ ಪೂರಕ.

3. ಸಮಯದ ಮತ್ತು ಸ್ಥಳದ ಅರಿವು ಅವರಿಗಾಗುವಂತೆ ಮಾಡುವುದು. ನಮ್ಮ ಮಕ್ಕಳಿಗೆ ಅವರ ವೈಯಕ್ತಿಕ ಇತಿ ಮಿತಿಗಳನ್ನು ಅರ್ಥಮಾಡಿಕೊಳ್ಳಲು ಮತ್ತು ಇತರರನ್ನು ಗೌರವಿಸಲು ಅಗತ್ಯವಾದ ಭಾವನಾತ್ಮಕ ಬುದ್ಧಿವಂತಿಕೆಯನ್ನು ಅಭಿವೃದ್ಧಿಪಡಿಕೊಳ್ಳಲು ಸಹಕರಿಸಬೇಕು. ಕುಟುಂಬದಲ್ಲಿ, ಸಮಾಜದಲ್ಲಿ ಆರೋಗ್ಯಕರ ಸಂಬಂಧಗಳನ್ನು ಬೆಳೆಸಿಕೊಳ್ಳಲು ಕಲಿಸಿಕೊಡಬೇಕು.

4. ಸಕಾರಾತ್ಮಕ ನಡವಳಿಕೆಯ ಮಹತ್ವವನ್ನು ಅರಿಯುವಂತೆ ಮಾಡುವುದು. ಮನೆಯಲ್ಲಿ ಪೋಷಕರು ಮತ್ತು ಶಾಲೆಯಲ್ಲಿ ಶಿಕ್ಷಕರು ತಮ್ಮ ಪರಸ್ಪರ ದೈನಂದಿನ ಕ್ರಿಯೆಗಳಲ್ಲಿ ಸ್ಪಷ್ಟತೆ ಮತ್ತು ಪರಸ್ಪರ ಗೌರವದ ನದವಳಿಕೆಗಳನ್ನು ಪ್ರದರ್ಶಿಸಬೇಕು, ನಮ್ಮನ್ನೇ ಅನುಕರಿಸುವ ಮಕ್ಕಳು ತಮ್ಮ ನಡವಳಿಕೆಗಳಲ್ಲಿ ಈ ವಿಷಯಗಳನ್ನು ಅಳವಡಿಸಿಕೊಳ್ಳುವ ಸಾಧ್ಯವಾಗುತ್ತದೆ. ಹಾಗಾಗಿ ನಮ್ಮ ಸರಿಯಾದ ನೆಡೆ ನುಡಿಗಳಿಂದ ಮಕ್ಕಳಿಗೆ ಹೇಳಬೇಕಾದ ಅಗತ್ಯ ತಿಳುವಳಿಕೆಯನ್ನು ನೀಡಬೇಕು.

5. ಭಾವನಾತ್ಮಕ ಮತ್ತು ವಾಸ್ತವೀಕತೆಯ ಅರಿವನ್ನು ಬೆಳಸುವುದು. ನಮ್ಮ ಮಕ್ಕಳು ಬಹಳಷ್ಟು ಸಮಯದಲ್ಲಿ ಭಾವನಾತ್ಮಕ ವಿಚಾರಗಳನ್ನು ತತಕ್ಷಣಕ್ಕೆ ಸರಿಯಲ್ಲದ ಸಮಯದಲ್ಲಿ ಪ್ರದರ್ಶನ ಮಾಡುತ್ತಾರೆ ಮತ್ತು ಅದರಿಂದ ಸಮಸ್ಯೆಗೆ ಗುರಿಯಾಗುತ್ತಾರೆ. ಹಾಗಾಗದಂತೆ ತಡೆದು ಅವರ ಸ್ವಂತ ಭಾವನೆಗಳನ್ನು ಮತ್ತು ಇತರರ ಭಾವನೆಗಳನ್ನು ಗುರುತಿಸಲು ಸಹಾಯ ಮಾಡಬೇಕು ಮತ್ತು ವಾಸ್ತವ ನೆಲೆಗಟ್ಟಿನಲ್ಲಿ ವಿಷಯಗಳನ್ನು ವಿಮರ್ಶೆಮಾಡುವ ಗುಣಗಳನ್ನು ಬೆಳಸಬೇಕು.

ಆಗ ಮಾತ್ರ ಒಂದು ಹಂತದ ಹದ್ದು ಮೀರಿವಿಕೆಯನ್ನು ತಡೆಯಬಹುದಾಗಿದೆ, ನೆನಪಿರಲಿ ಇ ಕೆಲಸ ಬಾಲ್ಯದಲ್ಲೇ ಅದು ಮನೆಯಿಂದಲೇ, ಅದು ಕೂಡ.. ನಿಮ್ಮಿಂದಲೇ ಪ್ರಾರಂಭವಾದರೆ ಅತ್ಯುತ್ತಮ ಪಲಿತಾಂಶವನ್ನು ನಿಮ್ಮದಾಗಿಸಿಕೊಳ್ಳಬಹುದು. "ಬೆಳೆಯುವ ಸಿರಿ ಮೊಳಕೆಯಲ್ಲಿ" ಮರೆಯಬಾರದಲ್ಲವೆ. ಹಾಗೆ ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೆ.

# ಇಡಿಸಿಗಳು ಎಂದರೇನು?

ಹಾರ್ಮೋನುಗಳಂತೆ ಇರುವ ರಾಸಾಯನಿಕಗಳು/ ನೈಸರ್ಗಿಕವಸ್ತುಗಳು ನೈಸರ್ಗಿಕ ಹಾರ್ಮೋನು ಗಳನ್ನು ಅವುಗಳಕಾರ್ಯದಿಂದ ತಡೆಯುತ್ತವೆ ಅವುಗಳನ್ನು ಎಂಡೋಕ್ರೈನ್–ಡಿಸ್ರಪ್ಟಿಂಗ್ ಕೆಮಿಕಲ್ಸ್ ಎನ್ನಲಾಗುತ್ತದೆ. ಅವುಗಳು ಮನೆಯ ವಸ್ತುಗಳು, ಮಕ್ಕಳ ಆಟಿಕೆಗಳು, ಮೇಕಪ್ ವಸ್ತುಗಳು ಇತ್ಯಾದಿಗಳಲ್ಲಿರುತ್ತವೆ.

**ಸಾಮಾನ್ಯ ಇಡಿಸಿಗಳ ಪಟ್ಟಿ:**

1. ಬಿಸ್ಫೆನಾಲ್ ಎ(ಬಿಪಿಎ)
2. ಡಿಡಿಟಿ
3. ಥಾಲೇಟ್
4. ಟ್ರಿಕ್ಲೊಸಾನ್

ಸಾಫ್ಟ್ ಡ್ರಿಂಕ್ ಗಳನ್ನು ಕುಡಿಯುವಾಗ ಎರಡು ಬಾರಿ ಆಲೋಚಿಸಿಏಕೆಂದರೆ ಅವುಗಳಲ್ಲಿ ಕೀಟನಾಶಕವಿರುತ್ತದೆ ಮಹಿಳೆಯರ ಸಂತಾನೋತ್ಪಾದನೆಯ ಆರೋಗ್ಯ ಮತ್ತು ಜನಿಸದಮಗುವಿನ ಮೇಲೆ ಇಡಿಸಿಯ

**ಪರಿಣಾಮ:**

* ಗರ್ಭಧಾರಣೆಗೆ ಹಾನಿಯುಂಟು ಮಾಡಬಹುದು
* ನವಜಾತ ಶಿಶುವಿನ ಆರೋಗ್ಯದ ಮೇಲೆ ಋಣಾತ್ಮಕಪರಿಣಾಮ ಬೀರಬಹುದು
* ಮೈನೆರೆಯುವ ಅವಧಿ ಬದಲಾಯಿಸಬಹುದು
* ಕಲಿಕೆಯ ಮತ್ತು ವರ್ತನೆಯ ದೋಷಗಳಿಗೆಕಾರಣವಾಗಬಹುದು
* ಮಗುವಿನಲ್ಲಿ ಆಟಿಸ್ಟಿಕ್ ಸ್ಪೆಕ್ಟ್ರಂ ಸಮಸ್ಯೆಗಳಿಗೆಕಾರಣವಾಗಬಹುದು

ಪುರುಷರ ಸಂತಾನೋತ್ಪಾದನೆಯ ಆರೋಗ್ಯದ ಮೇಲೆ ಇಡಿಸಿಪರಿಣಾಮ

* ವೀರ್ಯದ ಗುಣಮಟ್ಟಕ್ಕೆ ಹಾನಿಯುಂಟು ಮಾಡಬಹುದು
* ವೀರ್ಯ ಉತ್ಪಾದನೆಗೆ ಬಾಧಿಸಬಹುದು

ಗರ್ಭಧಾರಣೆಯ ಅವಧಿಯಲ್ಲಿ ಇಡಿಸಿಗೆ ತೆರೆದುಕೊಳ್ಳುವುದುಕೂಡಾ ಜನನಾಂಗದ ವಿರೂಪವಾದ ಕೆಳಗಿಳಿಯದ ವೃಷಣಗಳು, ಶಿಶ್ನದ ವಿರೂಪತೆ ಮತ್ತು ಅವಧಿಪೂರ್ವ ಜನನಕ್ಕೆಕಾರಣವಾಗಬಹುದು.

**ಇಡಿಸಿಗಳಿಗೆ ತೆರೆದುಕೊಳ್ಳುವಿಕೆ ಕಡಿಮೆ ಮಾಡುವುದು ಹೇಗೆ?**

* ಬಿಪಿಎ ಮುಕ್ತ ಉತ್ಪನ್ನಗಳನ್ನು ಬಳಸಿ
* ಪ್ಲಾಸ್ಟಿಕ್ ಕಂಟೈನರ್ ಗಳಲ್ಲಿ ಆಹಾರ ಬಿಸಿ ಮಾಡುವುದನ್ನುತಪ್ಪಿಸಿ
* ಸುವಾಸನೆಯ ಸಾಬೂನು ತಪ್ಪಿಸಿ
* ಆಗಾಗ್ಗೆ ಧೂಳು ಮತ್ತು ವ್ಯಾಕ್ಯೂಮ್ ಮಾಡಿರಿ(ಮನೆಯೊಳಗಿನ ವಸ್ತುಗಳಲ್ಲಿ ಜ್ವಾಲೆ ನಿರೋಧಕರಾಸಾಯನಿಕಗಳಿಂದ ನಿವಾರಿಸಿ)
* ಸುವಾಸನೆಯಿಲ್ಲದ ಕ್ರೀಂಗಳು, ಸ್ವಚ್ಛತೆಯ ಉತ್ಪನ್ನಗಳುಮತ್ತು ಲಾಂಡ್ರಿ ಡಿಟರ್ಜೆಂಟ್ ಗಳನ್ನು ಆಯ್ಕೆ ಮಾಡಿರಿ
* ಕ್ಯಾನ್ಡ್ ಫುಡ್ಸ್ ತಪ್ಪಿಸಿ
* ನೀವು ಯಾವುದೇ ಉತ್ಪನ್ನವನ್ನು ಖರೀದಿಸುವ ಮುನ್ನಲೇಬಲ್ ಗಳನ್ನು ನೋಡಿ
* ಕೀಟನಾಶಕಗಳ ಬಳಕೆಯಿಲ್ಲದ ಉತ್ಪಾದಿಸಿದ ಆಹಾರ ಸೇವಿಸಲು ಪ್ರಯತ್ನಿಸಿ.

ಆರೋಗ್ಯ ಸಲಹೆ



ಡಾ.ಗಂಗೋತ್ರಿ .ಎಸ್
ಸ್ತ್ರೀರೋಗ ತಜ್ಞರು, ಹೊಸಪೇಟೆ


Scan For Digital Colourful
HAMPI TIMES E-paper

# ಪಿತೃ ಪಕ್ಷ ಎಂಬ ಕೃತಜ್ಞತಾ ವಿಧಿ..

■ ಪಲ್ಲವಿ ಚೆನ್ನಬಸಪ್ಪ

ನಮ್ಮ ದೇಶದ ಸನಾತನ ಸಂಸ್ಕೃತಿಯಲ್ಲಿ ಸಾಕಷ್ಟು ವಿಧಗಳು ಮತ್ತು ವೈವಿಧ್ಯತೆಗಳು ಇವೆ. ಪ್ರತಿಯೊಂದು ಆಚರಣೆಗಳೂ ಕೂಡ ಅರ್ಥಪೂರ್ಣ ಕಾರಣಗಳು ಮತ್ತು ವಿಭಿನ್ನತೆಯನ್ನು ಒಳಗೊಂಡಿವೆ. ಅಂತಾ ಆಚರಣೆಗಳಲ್ಲಿ ಒಂದಾದ ಶ್ರಾದ್ಧ ಅಥವಾ ಪಿತೃಪಕ್ಷ ಪೂಜೆಯು ತನ್ನದೇ ಆದ ಮಹತ್ವ ಹೊಂದಿದೆ. ಪಿತೃಗಳು ಎಂದರೆ ನಮ್ಮ ಪೂರ್ವಜರು. ನಮ್ಮ ಜನ್ಮಕ್ಕೆ ಕಾರಣಕರ್ತರಾದ ಅಥವಾ ಈ ಭೂಮಿಯಲ್ಲಿ ನಮ್ಮ ಹುಟ್ಟಿಗೆ ಆಸರೆಯಾದ ಕುಟುಂಬದವರು, ತಂದೆ ತಾಯಿಗಳು ಮತ್ತು ಅವರ ಹಿಂದಿನ ತಲೆಮಾರು. ಹುಟ್ಟಿದ ಪ್ರತಿಯೊಂದು ಜೀವಿಗೂ ಕರ್ಮದ ನಂಟು ಇದ್ದೇ ಇರುತ್ತದೆ. ಅದೆಲ್ಲವನ್ನೂ ತೀರಿಸಿಕೊಂಡರೆ ಜನನ ಮರಣಗಳ ಜಂಜಾಟಗಳಿಂದ ಮುಕ್ತಿ ಸಾಧ್ಯ ಎಂಬ ನಂಬಿಕೆಯಿದೆ. ಹಾಗೆಯೇ ಮನುಜನಾಗಿ ಹುಟ್ಟಿದಮೇಲೆ ನಿಭಾಯಿಸಲೇ ಬೇಕಾದ ಒಂದಷ್ಟು ಕರ್ತವ್ಯಗಳು, ವಿಧಿ ವಿಧಾನಗಳು ಇವೆ ಎಂದು ನಮ್ಮ ಶಾಸ್ತ್ರಗಳು ಹೇಳುತ್ತವೆ. ಮನುಷ್ಯ ಮುಖ್ಯವಾಗಿ 5 ಋಣಗಳಿವೆ ತಾನು ತೀರಿಸಲೇ ಬೇಕಾದ್ದು. ದೇವಋಣ, ಋಷಿಋಣ, ಪಿತೃಋಣ, ಮನುಷ್ಯಋಣ, ಭೂತಋಣ.

ಇವುಗಳಲ್ಲಿ ಪಿತೃಋಣವು ಬಹಳ ಮಹತ್ವ ಪಡೆದಿದೆ. ಈ ಕುರಿತು ಒಂದು ಕಥೆ ಪ್ರಚಲಿತದಲ್ಲಿದೆ. ಮಹಾಭಾರತದ ಪ್ರಕಾರ, ಕರ್ಣ ತನ್ನ ಜೀವಿತಾವಧಿಯಲ್ಲಿ ಸಾಕಷ್ಟು ಚಿನ್ನ ಬೆಳ್ಳಿ ವಜ್ರ ವೈಡೂರ್ಯಗಳನ್ನು ದಾನ ಮಾಡಿರುತ್ತಾನೆ. ಸತ್ತಮೇಲೆ ಮೇಲಿನ ಲೋಕದಲ್ಲಿ ಅವನಿಗೆ ತಿನ್ನಲು ಚಿನ್ನವನ್ನೇ ಕೊಟ್ಟರು. ಆದರೆ ಅವನಿಗೆ ಹಸಿವಾಗಿದ್ದರಿಂದ ನಿಜವಾದ ಅನ್ನ ಬೇಕಾಗಿತ್ತು. ಅದಕ್ಕೆ ಇಂದ್ರನನ್ನು ಕೇಳಿದಾಗ, " ನೀನು ಬದುಕಿರುವಾಗ ಬೇಕಾದಷ್ಟು ಚಿನ್ನ ಸಂಪತ್ತುಗಳನ್ನು ದಾನ ಮಾಡಿರುವೆ. ಆದರೆ ನಿನ್ನ ಪಿತೃಗಳಿಗಾಗಿ ಯಾವ ಶ್ರಾದ್ಧ ತರ್ಪಣಗಳನ್ನು ನೀಡಿಲ್ಲ. ಆದ್ದರಿಂದ ಅನ್ನ ಸಿಗ್ತಿಲ್ಲ" ಎನ್ನುತ್ತಾನೆ. " ನನಗೆ ನನ್ನ ಪಿತ್ರುಗಳ ಬಗ್ಗೆ ಗೊತ್ತಿಲ್ಲವಾಗಿ ನಾನದನ್ನು ಕೊಟ್ಟಿಲ್ಲ. ಒಂದು ಅವಕಾಶ ಕೊಡಿ" ಎಂದು ಬೇಡಿಕೊಂಡಂನಂತೆ ಕರ್ಣ. ಆದ ಕಾರಣವಾಗಿ ಅವನನ್ನು 'ನಿನ್ನ ಪಿತೃಗಳಿಗಾಗಿ ಏನಾದರು ಮಾಡಿ ಬಾ' ಎಂದು ಒಂದು ಅವಕಾಶ ಕೊಟ್ಟು ಭೂ ಲೋಕಕ್ಕೆ ಕಳುಹಿಸಿದರಂತೆ. ಅದುವೇ ಭಾದ್ರಪದ ಮಾಸ, ಕೃಷ್ಣ ಪಕ್ಷದಲ್ಲಿ. ಹಾಗಾಗಿ ಈ ಮಾಸದ ದಿನಗಳು ಪಿತೃಕಾರ್ಯಕ್ಕೆ ಮೀಸಲು. ಈ ಸಮಯದಲ್ಲಿ ನಮ್ಮ ಪಿತ್ರುಗಳು ಭೂ ಲೋಕಕ್ಕೆ ಬಂದು, ತಮ್ಮ ಕುಟುಂಬದವರು ಅವರ ನೆನಪಿಗಾಗಿ ಕೊಡುವ ದಾನ, ತರ್ಪಣ, ಎಲ್ಲವನ್ನೂ ಸ್ವೀಕರಿಸಿ ಕುಲೋದ್ಧಾರಕ್ಕಾಗಿ ಸಂತೃಪ್ತಿಯಿಂದ ಹರಸಿ ಹೋಗುತ್ತಾರೆ ಎಂಬ ನಂಬಿಕೆಯಿದೆ. ಈ ಆಚರಣೆಗೆ ಯಾವುದೇ ಮತಭೇದವಿಲ್ಲ. ಎಲ್ಲರೂ ಮಾಡಲೇಬೇಕಾದ ಕಾರ್ಯವಿದು.



ನಮ್ಮ ಪೂರ್ವಜರು ಇದ್ದಾಗ ಅವರನ್ನು ಶ್ರದ್ದೆಯಿಂದ ನೋಡಿಕೊಂಡು, ಅವರು ನಮ್ಮನ್ನಗಲಿ ಹೋದಮೇಲೂ, ಅವರು ನಮಗಾಗಿ ಕೊಟ್ಟಿರುವ ಜನ್ಮ, ನಾಮ, ಆಸರೆ, ಎಲ್ಲದಕ್ಕೂ ಕೃತಜ್ಞತೆ ತಾಳಿ ಕೆಲವು ವಿಧಾನಗಳ ಮೂಲಕ, ನಮ್ಮ ಶಕ್ತ್ಯಾನುಸಾರ ಧನ್ಯವಾದ ಅರ್ಪಿಸುವ ವಿದಿಯೇ ಶ್ರಾದ್ಧ. ಯಾವ ವ್ಯಕ್ತಿಯು ತನ್ನ ಜೀವನದಲ್ಲಿ ಪಿತೃಕಾರ್ಯವನ್ನು ಮಾಡುವುದಿಲ್ಲವೋ, ಅವನು ಮಾಡುವ ಬೇರಾವುದೇ ಯಜ್ಞ ಅಥವಾ ದೇವತಾ ಕಾರ್ಯಗಳು ಯಶಸ್ವಿಯಾಗುವುದಿಲ್ಲ, ದೇವತೆಗಳು ಅವನ ಪೂಜೆಯನ್ನು ಸ್ವೀಕರಿಸುವುದಿಲ್ಲ ಎನ್ನುತ್ತದೆ ಶಾಸ್ತ್ರ. ಇಷ್ಟು ಮಹತ್ವವಿರುವ ಈ ಆಚರಣೆಯನ್ನು ನಾವೆಲ್ಲರೂ ಪಾಲಿಸಿ ಧನ್ಯತೆ ಹೊಂದೋಣ. ಜೀವನದಲ್ಲಿ ದಕ್ಕಿದ ಪ್ರತಿಯೊಂದಕ್ಕೂ ಕೃತಜ್ಞರಾಗಿರೋಣ. ಹಸುವು ಎಷ್ಟೇ ದೊಡ್ಡ ಹಿಂಡಿನೊಳಗಿದ್ದರು, ಕರು ತನ್ನ ತಾಯಿಯನ್ನೇ ಹುಡುಕಿಕೊಂಡು ಹೋಗಿ ಹಾಲು ಕುಡಿಯುವಂತೆ, ನಾವು ಮಾಡುವ ಕರ್ಮಗಳು, ನಾವು ಎಲ್ಲಿ ಯಾವ ರೂಪದಲ್ಲಿದ್ದರು ಬಂದು ಅವುಗಳ ಫಲವನ್ನು ನೀಡಿ ಹೋಗುತ್ತವೆ. ಅವಿನಾಶಿ ಆತ್ಮ ತನ್ನ ಕರ್ಮಫಲಗಳನ್ನು ಭೋಗಿಸಿ ಕಳೆದುಕೊಳ್ಳುವುದಕ್ಕೆ ಒಂದು ಸಾಧನ ಬೇಕು. ಅದುವೇ ಈ ದೇಹ. ಈ ದೇಹಕೊಟ್ಟ ನಮ್ಮ ಪಿತೃಗಳು ಮತ್ತು ಪರಮಾತ್ಮನಿಗೆ ಧನ್ಯವಾದ ಅರ್ಪಿಸುತ್ತ, ಬಂಧಮುಕ್ತಾರಾಗೋಣ.

# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA
Email: hampitimes@gmail.com | M:94486 33038








ಸಂಪುಟ:02 • ಸಂಚಿಕೆ: 87 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 29.09.2024 • ಭಾನುವಾರ • ಪುಟ:04 • ಬೆಲೆ:2

Volume:02 • Issue: 87 • PRGI No:KARKAN/2023/88055 • VIJAYANAGARA • 29.09.2024 • Sunday • Page:04 • Rs:2







ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
ಡಿ..ವಿ.ಜಿ.

## ನಿತ್ಯ ಪಂಚಾಂಗ

ಮಾಸ: ಭಾದ್ರಪದ । ಸಂವತ್ಸರ: ಕ್ರೋಧಿ

29–09–2024 – ಭಾನುವಾರ

| | |
|---|---|
| ತಿಥಿ | : ದ್ವಾದಶಿ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಮಾಘಾ |
| ಯೋಗ | : ಸಾಧ್ಯ |
| ಕರಣ | : ಗರಜ |
| ಸೂರ್ಯೋದಯ | : 06:19:02 |
| ಸೂರ್ಯಾಸ್ತ | : 18:14:49 |
| ರಾಹು ಕಾಲ | : 16:45–18:15 |
| ಯಮಘಂಡ ಕಾಲ | : 12:17–13:46 |
| ಗುಳಿಕ ಕಾಲ | : 15:16–16:45 |

## ತುಂಗಭದ್ರಾ ನೀರಿನ ಮಟ್ಟ



ಶನಿವಾರ : 28–09–2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1632.00 ಅಡಿ |
| ಒಳ ಹರಿವು | 15550 ಕ್ಯುಸೆಕ್ |
| ಹೊರ ಹರಿವು | 14408 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 101.773 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| ಕಳೆದ ವರ್ಷ ಇದೇ ದಿನ | |
| ಇಂದಿನ ಮಟ್ಟ | 1618.79 ಅಡಿ |
| ಒಳ ಹರಿವು | 881 ಕ್ಯುಸೆಕ್ |
| ಹೊರ ಹರಿವು | 9549 ಕ್ಯುಸೆಕ್ |
| ಸಾಮರ್ಥ್ಯ | 57.999 ಟಿಎಂಸಿ |

## ಕವಿ ಮನಸು

### ಒಡೆದ ಕನ್ನಡಿ

ಮುರಿದ ನಂಬಿಕೆ ವಿಶ್ವಾಸವು
ಒಡೆದ ಕನ್ನಡಿಗ ಸಮವು
ಜೋಡಿಸಲು ಎಂದಿಗೂ ಅಸಾಧ್ಯವು
ಬಿಡದೆ ಕಾಡುವುದು ದುಃಖವು

ಚೂರಾಗಿದೆ ಭರವಸೆಯ ಒಡಲು
ಬರಿದಾಗಿದೆ ಪ್ರೀತಿಯ ಕಡಲು
ಮನದೊಳಗೆ ಯಾಕೋ ದಿಗಿಲು
ಮರೆಯಾಗುತ್ತಿದೆ ಬಾಳಿನ ಹಗಲು

ಮುಖವು ಮನಸ್ಸಿನ ಕನ್ನಡಿ
ನೋವು ನಲಿವಿನ ಜೊತೆಗೂಡಿ
ಕಷ್ಟ ಸುಖದ ಒಡನಾಡಿ
ಬರೆಯೋಣ ಬದುಕಿನ ಮುನ್ನುಡಿ

– ಚೇತನ ಭಾರ್ಗವ
ಬೆಂಗಳೂರು

## ನಿಧನ ಸುದ್ದಿ

### ಕೆ.ಎಚ್.ಭೋಜರಾಜ್ ನಿಧನ



**ಹೊಸಪೇಟೆ:** ಇಲ್ಲಿನ ಜಂಬುನಾಥ ರಸ್ತೆಯ ಗವಿಸಿದ್ದೇಶ್ವರ ನಗರ ನಿವಾಸಿ ಕೆ.ಎಚ್. ಭೋಜರಾಜ್ (75) ಶನಿವಾರ ಬೆಳಿಗಿನ ಜಾವ ನಿಧನರಾದರು. ಮೃತರಿಗೆ ಪತ್ನಿ ಹಾಗೂ ಇಬ್ಬರು ಪುತ್ರರು ಇದ್ದಾರೆ. ನಗರದ ಮುಕ್ತಿಧಾಮದಲ್ಲಿ ಶನಿವಾರ ಮಧ್ಯಾಹ್ನ ಅಂತ್ಯ ಕ್ರಿಯೆ ನೆರವೇರಿತು.

# ಸಂಪತ್ತಿಗಿಂತ ಜನರ ಆರೋಗ್ಯ ಮುಖ್ಯ

## ಶಾಸಕ ಎಚ್.ಆರ್.ಗವಿಯಪ್ಪ ಹೇಳಿಕೆ । 28.52 ಕೋಟಿ ರೂನಲ್ಲಿ ಕ್ರಿಟಿಕಲ್ ಕೇರ್ ಆಸ್ಪತ್ರೆ ನಿರ್ಮಾಣ

## ಅಖಂಡ ಜಿಲ್ಲೆಯ ಜನರ ಸರ್ವತೋಮುಖ ಅಭಿವೃದ್ಧಿಗೆ ನಾನಾ ಯೋಜನೆ : ಸಂಸದ ಈ ತುಕರಾಂ

■ **ಹಂಪಿ ಟೈಮ್ಸ್ ಹೊಸಪೇಟೆ**

ವಿಜಯನಗರ ಜಿಲ್ಲೆಯ ಹೊಸಪೇಟೆ ತಾಲೂಕಿನಲ್ಲಿ 50 ಹಾಸಿಗೆಗಳ ಕ್ರಿಟಿಕಲ್ ಕೇರ್ ಯೂನಿಟ್ ಆಸ್ಪತ್ರೆ ನಿರ್ಮಾಣದ ಕಾಮಗಾರಿಗೆ ಸಂಸದ ಈ. ತುಕಾರಾಮ ಮತ್ತು ಶಾಸಕ ಹೆಚ್.ಆರ್.ಗವಿಯಪ್ಪ ಶನಿವಾರ ಭೂಮಿ ಪೂಜೆ ನೆರವೇರಿಸಿದರು.

ಹೊಸಪೇಟೆಯ ಜಿಲ್ಲಾ ಆಸ್ಪತ್ರೆ ಆವರಣದಲ್ಲಿ ಸಂಸದ ಈ ತುಕಾರಾಮ ನಡೆದ ಸಮಾರಂಭ ಉದ್ಘಾಟಿಸಿ ಮಾತನಾಡಿ, ಅಂದಾಜು 28.52 ಕೋಟಿ ರೂ.ವೆಚ್ಚದಲ್ಲಿ ಸೆ.28ರಂದು ಭೂಮಿ ಪೂಜೆಯನ್ನು ನೆರವೇರಿಸಿರುವುದು ವಿಜಯನಗರ ಜಿಲ್ಲೆಯಲ್ಲಿ ಇತಿಹಾಸವಾಗಿ ಉಳಿಯಲಿದೆ. ಇದಕ್ಕೆ ಅವಕಾಶ ಕಲ್ಪಿಸಿದ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಗೆ ತಾವು ಅಭಿನಂದನೆ ತಿಳಿಸುವುದಾಗಿ ಹೇಳಿದರು.

ವಿಜಯನಗರ ಜಿಲ್ಲೆ ಜೊತೆಗೆ ಅಖಂಡ ಬಳ್ಳಾರಿ ಜನರ ಆಶಯಗಳಿಗೆ ನಾವು ಸದಾಕಾಲ ಸ್ಪಂದನೆ ನೀಡುತ್ತಿದ್ದೇವೆ. ಆರೋಗ್ಯ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಇನ್ನು ಸಹ ಸಾಕಷ್ಟು ಸುಧಾರಣೆ ತರುವ ಸಂಕಲ್ಪ ಮಾಡುತ್ತಿದ್ದು ಹೊಸ ಹೊಸ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸಲು ನಾವು ಬದ್ಧರಾಗಿದ್ದೇವೆ ಎಂದರು.

ಮನುಷ್ಯನಿಗೆ ಆರೋಗ್ಯ ತುಂಬಾ ಮುಖ್ಯ. ಈ ನಿಟ್ಟಿನಲ್ಲಿ ವಿಜಯನಗರ ಮತ್ತು ಬಳ್ಳಾರಿಯ ಲಕ್ಷಾಂತರ ಜನರ ಆರೋಗ್ಯ ಸುಧಾರಣೆ, ರಕ್ಷಣೆಯ ಉದ್ದೇಶ ಹೊಂದಿ ವಿವಿಧೆಡೆ ಆಸ್ಪತ್ರೆಗಳ ನಿರ್ಮಾಣ ಕಾರ್ಯ ಮಾಡುತ್ತಿದ್ದೇವೆ. ನಮ್ಮ ಜಿಲ್ಲೆಯಲ್ಲಿ ತುಂಗಭದ್ರಾ ಡ್ಯಾಂ ಇದೆ. ಪ್ರಖ್ಯಾತ ಕಾರ್ಖಾನೆಗಳಿವೆ. ಹೇರಳವಾದ ಪ್ರಾಕೃತಿಕ ಸಂಪತ್ತಿದೆ. ಇಲ್ಲಿನ ಪ್ರಾಕೃತಿಕ ಸಂಪತ್ತು ಮತ್ತು ನೀರಿನ ಸಂಪನ್ಮೂಲ ಬಳಸಿಕೊಂಡು ಮುಂದಿನ ಪೀಳಿಗೆಯು ನೆನಪಿಸುವ ಹಾಗೆ ಯೋಜನೆಗಳನ್ನು ರೂಪಿಸಿ ಅನುಷ್ಠಾನ ಮಾಡಲು ಸಂಕಲ್ಪ ಮಾಡಿದ್ದಾಗಿ ಸಂಸದರು ತಿಳಿಸಿದರು.



ವಿಜಯನಗರ ವಿಧಾನಸಭಾ ಕ್ಷೇತ್ರದ ಶಾಸಕ ಎಚ್.ಆರ್.ಗವಿಯಪ್ಪ ಮಾತನಾಡಿ, ಸಂಪತ್ತಿಗಿಂತ ಆರೋಗ್ಯ ಹೆಚ್ಚು ಎಂಬುದನ್ನು ಗಮನದಲ್ಲಿಟ್ಟುಕೊಂಡು ಹೊಸಪೇಟೆ ಅಷ್ಟೇ ಅಲ್ಲ ಇಡೀ ಜಿಲ್ಲೆಯ ಜನರ ಅನುಕೂಲಕ್ಕಾಗಿ ಆಸ್ಪತ್ರೆಗಳನ್ನು ಕಟ್ಟುವ ಕಾರ್ಯ ಮಾಡುತ್ತಿದ್ದೇವೆ. 28.52 ಕೋಟಿ ರೂ.ವೆಚ್ಚದಲ್ಲಿ ಈಗ ನಿರ್ಮಾಣವಾಗಲಿರುವ 50 ಹಾಸಿಗೆಗಳ ಕ್ರಿಟಿಕಲ್ ಕೇರ್ ಯೂನಿಟ್ ಆಸ್ಪತ್ರೆಯಿಂದ ಸಾಕಷ್ಟು ಅನುಕೂಲವಾಗಲಿದೆ ಎಂದು ತಿಳಿಸಿದರು.

ಹೊಸಪೇಟೆ ನಗರದಲ್ಲಿ ಈಗಿರುವ ಸರ್ಕಾರಿ ಆಸ್ಪತ್ರೆಗಳಿಗೆ ಬರುವ ಸಾರ್ವಜನಿಕರ ಸಂಖ್ಯೆ ಹೆಚ್ಚುತ್ತಿದೆ. ಇದನ್ನು ಗಮನದಲ್ಲಿರಿಸಿಕೊಂಡು ಕೆಲವು ಆಸ್ಪತ್ರೆಗಳನ್ನು ಮೇಲ್ದರ್ಜೇರಿಸಬೇಕು ಎಂಬುದಾಗಿ ಕೇಳಿದ್ದೇವೆ. ಸಮಾಜದ ಬೆಳವಣಿಗೆಯಲ್ಲಿ ಜನರ ಆರೋಗ್ಯದ ಸ್ಥಿತಿಗತಿಯು ಸಹ ಪ್ರಮುಖ ಪಾತ್ರ ವಹಿಸುತ್ತದೆ. ಈ ನಿಟ್ಟಿನಲ್ಲಿ ನಾವು ಯೋಚಿಸಿ ಯೋಜಿಸಿ ಬೇರೆ ಬೇರೆ ಕೆಲಸ ಕಾರ್ಯಗಳ ಜೊತೆಗೆ ಕ್ಷೇತ್ರದಲ್ಲಿ ಆರೋಗ್ಯ ಕ್ಷೇತ್ರದ ಬೆಳವಣಿಗೆಯ ಕಾರ್ಯಕ್ಕು ಸಹ ಅಷ್ಟೇ ಆದ್ಯತೆ ನೀಡಿರುವುದಾಗಿ ಶಾಸಕರು ತಿಳಿಸಿದರು.

ಸಮಾರಂಭದಲ್ಲಿ ಹಗರಿಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರದ ಶಾಸಕರಾದ ನೇಮಿರಾಜ ನಾಯ್ಕ್, ಹೊಸಪೇಟೆಯ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಹೆಚ್.ಎನ್.ಎಫ್.ಇಮಾಮ್ ನಿಯಾಜಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳಾದ ಎಲ್.ಆರ್.ಶಂಕರ್ ನಾಯ್ಕ್, ನಗರಸಭೆ ಉಪಾಧ್ಯಕ್ಷರಾದ ರಮೇಶ್ ಗುಪ್ತ, ಆರ್‌ಸಿಎಚ್ ಅಧಿಕಾರಿಗಳಾದ ಡಾ.ಜಂಬಯ್ಯ, ಆರೋಗ್ಯ ಶಿಕ್ಷಣಾಧಿಕಾರಿ ಡಾ.ದೊಡ್ಡಮನಿ ಎಂ.ಪಿ, ತಾಲೂಕು ಆರೋಗ್ಯ ಅಧಿಕಾರಿ ಡಾ. ಭಾಸ್ಕರ್ ಹಾಗೂ ಆರೋಗ್ಯ ಇಲಾಖೆಯ ಇನ್ನಿತರ ಅಧಿಕಾರಿಗಳು ಮತ್ತು ಸಿಬ್ಬಂದಿ ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

# 14 ಕೋಟಿ ರೂ. ವೆಚ್ಚದಲ್ಲಿ ಶೀಘ್ರ ಮಿನಿ ವಿಧಾನಸೌಧ ನಿರ್ಮಾಣಕ್ಕೆ ಚಾಲನೆ

## ಶಾಸಕ ಕೆ.ನೇಮಿರಾಜ್ ನಾಯ್ಕ್ ಹೇಳಿಕೆ । ಶಿಕ್ಷಕರ ದಿನಾಚರಣೆ



■ **ಹಂಪಿ ಟೈಮ್ಸ್ ಕೊಟ್ಟೂರು.**

ವಿದ್ಯಾರ್ಥಿಗಳನ್ನು ಶಿಕ್ಷಕರು ಅಕ್ಷರ ಜ್ಞಾನದಿಂದ ತಿದ್ದಿ, ತೀಡಿ ಸಮಾಜಕ್ಕೆ ಉತ್ತಮ ವ್ಯಕ್ತಿಗಳಾಗಿ ನಿರ್ಮಾಣ ಮಾಡುವ ಶಿಕ್ಷಕರು ಪಾತ್ರ ದೊಡ್ಡದು, ಅವರು ಶಿಷ್ಯರ ಪಾಲಿಗೆ ದೇವರುಗಳು, ಎಲ್ಲಾ ವೃತ್ತಿಗಿಂತ ಶಿಕ್ಷಕರ ವೃತ್ತಿ ಪವಿತ್ರವಾದದ್ದು ಎಂದು ಕ್ಷೇತ್ರದ ಶಾಸಕ ಕೆ.ನೇಮಿರಾಜ್ ನಾಯ್ಕ್ ಹೇಳಿದರು.

ಪಟ್ಟಣದ ಮರುಳಸಿದ್ದೇಶ್ವರ ಸಭಾಂಗಣದಲ್ಲಿ ಡಾ.ಸರ್ವಪಲ್ಲಿ ರಾಧಾಕೃಷ್ಣನ್ 136ನೇ ಜಯಂತಿ ಅಂಗವಾಗಿ ಏರ್ಪಡಿಸಿದ್ದ ಶಿಕ್ಷಕರ ದಿನಾಚರಣೆ ತಾಲೂಕು ಮಟ್ಟದ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಡಾ.ಸರ್ವಪಲ್ಲಿ ರಾಧಾಕೃಷ್ಣನ್ ಸಹೃದಯ ವ್ಯಕ್ತಿತ್ವವುಳ್ಳವರು, ಶಿಕ್ಷಕರ ಮೇಲಿನ ಅವರ ಅಪಾರ ಪ್ರೀತಿ, ಕಾಳಜಿಯಿಂದ ಶಿಕ್ಷಕರ ದಿನಾಚರಣೆ ದಿನದಂದು ಅವರ ಜಯಂತಿ ಆಚರಣೆಗೆ ಮಾಡಲಾಗುತ್ತಿದೆ ಎಂದರು.

ಹೇಳಿದ್ದನ್ನೇ ಹೇಳುವ ಸುಳ್ಳು ಶಾಸಕ ನಾನಲ್ಲ, ಸರ್ಕಾರದಲ್ಲಿ ಬಿಡಿಗಾಸು ಹಣ ಇಲ್ಲ ಆದರೆ ನಾನು ಕ್ಷೇತ್ರದ ಅಭಿವೃದ್ಧಿಗೆ ಮೈನಿಂಗ್, ಕಲ್ಯಾಣ ಕರ್ನಾಟಕ ಸೇರಿದಂತೆ ಇತರೆಡೆಯಿಂದ ಅನುದಾನ ತಂದು ಕ್ಷೇತ್ರವನ್ನು ಸರ್ವತೋಮುಖ ಅಭಿವೃದ್ಧಿಮಾಡುವೆ. ನನ್ನ ಅಧಿಕಾರವಧಿ ಒಂದುವರೆ ವರ್ಷದಲ್ಲಿ 700 ಕೋಟಿ ರೂ. ಮೈನಿಂಗ್, ಕೆ.ಕೆ.ಆರ್.ಡಿ.ಬಿ ಇತರೆಡೆಯಿಂದ ಅನುದಾನ ತಂದು ಕ್ಷೇತ್ರದಲ್ಲಿ ಅಭಿವೃದ್ಧಿ ಕೈಗೊಂಡಿರುವೆ ಎಂದು ಹೇಳಿ.

ಪಟ್ಟಣದ ಸರ್ಕಾರಿ ಆಸ್ಪತ್ರೆಯನ್ನು 50 ಬೆಡ್ ಮೇಲ್ದರ್ಜೆಗೆ ಏರಿಸಲು ಸಿದ್ದತೆ ನಡೆದಿದೆ, 14 ಕೋಟಿ ರೂ. ವೆಚ್ಚದಲ್ಲಿ ಶೀಘ್ರ ಮಿನಿ ವಿಧಾನಸೌಧ ನಿರ್ಮಾಣಕ್ಕೆ ಚಾಲನೆ ನೀಡುವೆ ಹಾಗೂ ಪಟ್ಟಣದ ಜನರಿಗೆ ಶುದ್ಧ ಕುಡಿಯುವ ನೀರನ್ನು ನೀಡಲು 83 ಕೋಟಿ ರೂ. ವೆಚ್ಚದ ಕಾಮಗಾರಿ ನಡೆಯಲಿದ್ದು ಗುಜರಾತ್ ಮೂಲದ ಗುತ್ತಿಗೆದಾರರಿಗೆ ಟೆಂಡರ್ ಮುಗಿದಿದೆ ಎಂದರು.

ಕನ್ನಡ ಪಂಡಿತ ವೀರಭದ್ರ ಕೋಡಿಹಳ್ಳಿ ಮಾತನಾಡಿ, ಶಿಕ್ಷಕರು ಶಿಕ್ಷಕ ವೃತ್ತಿಯನ್ನು, ವೃತ್ತಿಯಾಗಿ ಭಾವಿಸದೆ ಪ್ರವೃತ್ತಿಯಾಗಿ ಸೇವೆ ಸಲ್ಲಿಸಿದ್ದೇ ಆದರೆ ತಮ್ಮಗೂ ಮತ್ತು ತಮ್ಮ ವೃತ್ತಿಗೂ ಆನಂದದೊಂದಿಗೆ ಗೌರವವು ಲಭಿಸುತ್ತೆ ಎಂದು ಉಪನ್ಯಾಸ ನೀಡಿದರು.

ಕ್ಷೇತ್ರ ಶಿಕ್ಷಣಾಧಿಕಾರಿ ಪದ್ಮನಾಭ ಕರುಣಂ ಪ್ರಾಸ್ತಾವಿಕ ನುಡಿಗಳಾಡಿದರು. ಶಿಕ್ಷಕರ ದಿನಾಚರಣೆ ಸಮಿತಿ ಅಧ್ಯಕ್ಷರು ಡಾ.ಬಿ.ಆನಂದ್ ಕುಮಾರ್, ತಾ.ಪಂ ಇಒ ಮುಂದಿನ ಬಾರಿ ಸೆ–5 ರಂದು ಕೊಟ್ಟೂರು ತಾಲೂಕಿನಲ್ಲಿ ಶಿಕ್ಷಕರ ದಿನಾಚರಣೆ ಕಾರ್ಯಕ್ರಮಕ್ಕೆ ಅವಕಾಶ ಕೊಡಬೇಕು ಎಂದು ಶಾಸಕರಲ್ಲಿ ಕೋರಿದರು.

ಈ ವೇಳೆ ನಿವೃತ್ತ ಶಿಕ್ಷಕರಿಗೆ, ತಾಲೂಕು ಉತ್ತಮ ಶಿಕ್ಷಕರಿಗೆ ಸನ್ಮಾನ ಹಾಗೂ ನಿಧನ ಹೊಂದಿದ ಕುಟುಂಬದ ಸದಸ್ಯರಿಗೆ ಸಾಂತ್ವಾನ ಹೇಳಿದರು. ಕಾರ್ಯಕ್ರಮಕ್ಕೆ ನೆರವು ನೀಡಿದ ಮಹಾದೇವ ಎಜುಕೇಷನ್ ಅಂಡ್ ಚಾರಿಟೇಬಲ್ ಟ್ರಸ್ಟ್ ಆಡಳಿತಾಧಿಕಾರಿಗಳು ಬಿ.ಪಂಪಾಪತಿ ಹಾಗೂ ಪೃಥ್ವಿ ಡೆವಲಪರ್ ಬಿ.ಆರ್. ವಿಕ್ರಮ್ ಅವರಿಗೆ ಗೌರವ ಸಮರ್ಪಿಸಿದರು.

ವೇದಿಕೆಯಲ್ಲಿ ತಹಶಿಲ್ದಾರ ಅಮರೇಶ್ ಜಿ.ಕೆ. ಪಪಂ ಅಧ್ಯಕ್ಷೆ ರೇಖಾ ರಮೇಶ್, ಉಪಾಧ್ಯಕ್ಷ ಜಿ.ಸಿದ್ದಯ್ಯ, ಸರ್ಕಾರಿ ಪ.ಪೂ.ಕಾಲೇಜ್ ಪ್ರಾಚಾರ್ಯರು ಜಿ.ಸೋಮಶೇಖರ್, ಶಿಕ್ಷಕರಾದ ಜಗದೀಶ್, ಸಿದ್ದಪ್ಪ, ರೇವಣಸಿದ್ದಪ್ಪ, ಗುರುಬಸವರಾಜ್ ಇದ್ದರು.

ಕಾರ್ಯಕ್ರಮದಲ್ಲಿ ಎಂಎಂಜೆ ಹರ್ಷವರ್ಧನ, ಇಸಿಒ ನಿಂಗಪ್ಪ, ಸಿ.ಅಜ್ಜಪ್ಪ, ಡಿಎಸ್‌ಎಸ್ ಮುಖಂಡರು ಬದ್ದಿ ಮರಿಸ್ವಾಮಿ ಹಾಗೂ ತಾಲೂಕಿನ ಎಲ್ಲಾ ಬಿ.ಆರ್.ಸಿ. ಮತ್ತು ಸಿ.ಆರ್.ಪಿ ಗಳು ಹಾಗೂ ಶಾಲಾ ಶಿಕ್ಷಕ ವೃಂದದವರು ಹಾಜರಿದ್ದರು.

ಶಿಕ್ಷಕಿ ಶಶಿಕಲಾ ಪ್ರಾರ್ಥಿಸಿದರು, ಶಿಕ್ಷಕರಾದ ನಾಗೇಶ್ ಸ್ವಾಗತಿಸಿದರು, ಮೃತ್ಯುಂಜಯ ನಿರೂಪಿಸಿದರು, ಚಪ್ಪರದಹಳ್ಳಿ ಸರ್ಕಾರಿ ಶಾಲಾ ಮಕ್ಕಳಿಂದ ನಾಡಗೀತೆ, ರೈತಗೀತೆ ಹಾಡಿದರು.

# 105 ಕೋಟಿ ರೂನಲ್ಲಿ ರಾಷ್ಟ್ರೀಯ ಹೆದ್ದಾರಿ 50ರ ಸೇತುವೆಗಳ ನಿರ್ಮಾಣಕ್ಕೆ ಭೂಮಿಪೂಜೆ



■ **ಹಂಪಿ ಟೈಮ್ಸ್ ಕೊಪ್ಪಳ**

ಕೊಪ್ಪಳ ಲೋಕಸಭಾ ಕ್ಷೇತ್ರದ ವಾಪ್ತಿಯಲ್ಲಿನ ರಾಷ್ಟ್ರೀಯ ಹೆದ್ದಾರಿ 50ರಲ್ಲಿನ ವಿವಿಧ ಕಡೆಗಳಲ್ಲಿ 105 ಕೋಟಿ ರೂ.ಗಳ ವೆಚ್ಚದಲ್ಲಿ ಸೇತುವೆಗಳ ನಿರ್ಮಾಣಕ್ಕೆ ಸಂಸದರಾದ ಕೆ.ರಾಜಶೇಖರ ಹಿಟ್ನಾಳ ಹಾಗೂ ಶಾಸಕರಾದ ಕೆ.ರಾಘವೇಂದ್ರ ಹಿಟ್ನಾಳ ಅವರು ಸೆ.28ರಂದು ಭೂಮಿಪೂಜೆ ನೆರವೇರಿಸಿದರು.

ಕೊಪ್ಪಳ ತಾಲೂಕಿನ ಹೊಸಲಿಂಗಾಪುರ ಗ್ರಾಮದ ಹತ್ತಿರದ ರಾಷ್ಟ್ರೀಯ ಹೆದ್ದಾರಿ ಬಳಿಯಲ್ಲಿ ನಡೆದ ಸಮಾರಂಭವನ್ನು ದೀಪ ಬೆಳಗಿಸಿ ಉದ್ಘಾಟಿಸಿದ ಸಂಸದರಾದ ಕೆ.ರಾಜಶೇಖರ ಹಿಟ್ನಾಳ ಅವರು ಮಾತನಾಡಿ, ಕೊಪ್ಪಳ ಲೋಕಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ರಾಷ್ಟ್ರೀಯ ಹೆದ್ದಾರಿ–50ರಲ್ಲಿ 29.89 ಕೋಟಿ ರೂ.ವೆಚ್ಚದಲ್ಲಿ ಮತೆಗಲ್ ಗ್ರಾಮದ ಹತ್ತಿರ ಮೇಲ್ಸೇತುವೆ ನಿರ್ಮಾಣಕ್ಕೆ, 27.20 ಕೋಟಿ ರೂ.ವೆಚ್ಚದಲ್ಲಿ ಶಹಾಪುರ ಗ್ರಾಮದ ಹತ್ತಿರ ಲಘು ವಾಹನ ಸಂಚರಿಸುವ ಕೆಳಸೇತುವೆ ನಿರ್ಮಾಣಕ್ಕೆ, 29.04 ಕೋಟಿ ರೂ.ವೆಚ್ಚದಲ್ಲಿ ಹುಲಿಗಿ ಹತ್ತಿರ ಮೇಲ್ಸೇತುವೆ ನಿರ್ಮಾಣಕ್ಕೆ ಮತ್ತು 19.43 ಕೋಟಿ ರೂ. ವೆಚ್ಚದಲ್ಲಿ ಹೊಸಳ್ಳಿ ಹತ್ತಿರ ಕೆಳ ಸೇತುವೆ ನಿರ್ಮಾಣಕ್ಕೆ ಸೆ.28ರಂದು ಭೂಮಿಪೂಜೆ ನಡೆದಿರುವುದು ಕೊಪ್ಪಳ ಇತಿಹಾಸದಲ್ಲಿ ಸ್ಮರಣೀಯವಾಗಿ ಉಳಿಯಲಿದೆ ಎಂದರು.

ಈ ಪ್ರದೇಶದಲ್ಲಿ ಸೇತುವೆಗಳು ನಿರ್ಮಾಣವಾಗಬೇಕು ಎಂದು ಹಲವಾರು ಬಾರಿ ಹೋರಾಟಗಳು ನಡೆದಿದ್ದವು. ಈ ಸೇತುವೆಗಳ ಮಂಜೂರಾತಿಯ ಪ್ರಯತ್ನದಲ್ಲಿ ಹಿರಿಯರಾದ ಕರಡಿ ಸಂಗಣ್ಣ ಅವರ ಶ್ರಮವು ಶ್ಲಾಘನೀಯವಾಗಿದೆ ಎಂದರು. ಈ ಪ್ರದೇಶದಲ್ಲಿ ಸೇತುವೆಗಳ ನಿರ್ಮಾಣವು ಅತೀ ಅವಶ್ಯಕತೆ ಇತ್ತು. ರಾಷ್ಟ್ರೀಯ ಹೆದ್ದಾರಿ–50ರಲ್ಲಿ ಸೇತುವೆಗಳು ಇಲ್ಲದ ಕಾರಣ ಹಲವಾರು ವರ್ಷಗಳಿಂದ ವಿವಿಧೆಡೆ ಜನರು ರಸ್ತೆ ಅಪಘಾತದಲ್ಲಿ ಸಾವಿಗೀಡಾಗುವ ಪ್ರಕರಣಗಳು ಸಂಭವಿಸುತ್ತಿದ್ದವು. ಇನ್ಮೇಲೆ ಅದು ತಪ್ಪಲಿದೆ. ಈ ಸೇತುವೆಗಳು ನಿರ್ಮಾಣದಿಂದಾಗಿ ಸುಗಮ ಸಂಚಾರಕ್ಕೆ ಸಾಕಷ್ಟು ಅನುಕೂಲವಾಗಲಿದೆ ಎಂದರು.

ಶಾಸಕರಾದ ಕೆ.ರಾಘವೇಂದ್ರ ಹಿಟ್ನಾಳ ಅವರು ಮಾತನಾಡಿ, ಕೊಪ್ಪಳ ಲೋಕಸಭಾ ಕ್ಷೇತ್ರ ವ್ಯಾಪ್ತಿಯ ಕೊಪ್ಪಳ ವಿಧಾನಸಭಾ ಕ್ಷೇತ್ರದಲ್ಲಿ ಸೆ.28 ಸುದಿನವಾಗಿದೆ. ರಾಷ್ಟ್ರೀಯ ಹೆದ್ದಾರಿ–50ರಲ್ಲಿ ಕೆಲ ಕಡೆಗಳಲ್ಲಿ ಸೇತುವೆಗಳನ್ನು ನಿರ್ಮಾಣ ಮಾಡಬೇಕು ಎಂಬುದು ಕ್ಷೇತ್ರದ >>4

ಹಂಪಿ ಟೈಮ್ಸ್
HAMPI TIMES

ನಿಮ್ಮ ಸಂಸ್ಥೆಯ ಬ್ರ್ಯಾಂಡಿಂಗ್, ಉತ್ಪನ್ನ, ಸೇವೆಗಳ ಪ್ರಚಾರಕ್ಕಾಗಿ ಆಲೋಚಿಸುತ್ತಿದ್ದೀರಾ ?
ನಂ 1 ಜಿಲ್ಲಾಮಟ್ಟದ ದಿನಪತ್ರಿಕೆ
ಚಿಕ್ಕ ಮೊತ್ತ ದೊಡ್ಡ ಜಾಹೀರಾತು
ಸ್ಥಳೀಯ ಹಾಗೂ ವ್ಯಾಪಕ ಮಟ್ಟದಲ್ಲಿ ಜನಪ್ರಿಯ
90 ಸಾವಿರಕ್ಕೂ ಅಧಿಕ ಇ-ಪೇಪರ್ ಓದುಗರು
94486 33038 hampitimes@gmail.com
ಹಂಪಿ ಟೈಮ್ಸ್ ವಿಜಯನಗರದ ಹೆಮ್ಮೆ
ಪ್ರಿಂಟ್ & ಡಿಜಿಟಲ್ ದಿನಪತ್ರಿಕೆ
Print & Digital News Paper
ಹಂಪಿ ಟೈಮ್ಸ್ ಇ-ಪೇಪರ್
ಹಂಪಿ ಟೈಮ್ಸ್ ವಿಸ್ತಾರ : ಕರ್ನಾಟಕ, ಮಹಾರಾಷ್ಟ್ರ, ಕೇರಳ, ತೆಲಂಗಾಣ, ತಮಿಳುನಾಡು, ಆಂಧ್ರಪ್ರದೇಶ, ಉತ್ತರ ಪ್ರದೇಶ, ಗುಜರಾತ್, ಹರಿಯಾಣ, ರಾಜಸ್ಥಾನ & ಅಮೇರಿಕಾ, ಇಂಗ್ಲೆಂಡ್, ಕೆನಡಾ ಇತರೆ ರಾಷ್ಟ್ರಗಳಲ್ಲಿರುವ ಕನ್ನಡ ಓದುಗರ ಕೈಯಲ್ಲಿ ಹಂಪಿ ಟೈಮ್ಸ್ ಇ ಪೇಪರ್

www.hampitimes.com
epaper.hampitimes.com

COLD PRESSED OILS
HEALTH Benefits

- Heart Healthy
- Diabetes Friendly
- Healthy Skin & More
- Hair Fall Control

Nandi Enterprises
C/o HAMPI TIMES
Valmiki Circle, HOSAPETE
9482599089

# ಪ್ರಾ. ಗ್ರಾ. ಕೃಷಿ ಸಹಕಾರ ಸಂಘದ ಶತಮಾನೋತ್ಸವ ಊರ ಹಬ್ಬದಂತೆ ಆಚರಿಸೋಣ ಬನ್ನಿ : ಸಿ.ಆಶ್ಯಾಂ






**ಹೊಸಪೇಟೆ ತಾಲೂಕಿನ ನಾಗೇನಹಳ್ಳಿಯ ವಿವಿದೋದ್ದೇಶ ಪ್ರಾಥಮಿಕ ಗ್ರಾಮೀಣ ಕೃಷಿ ಸಹಕಾರ ಸಂಘ ನಿಯಮಿತದ ಶತಮಾನೋತ್ಸವ ಆಚರಣೆಯ ಪೂರ್ವಭಾವಿ ಸಭೆ**

■ **ಹಂಪಿ ಟೈಮ್ಸ್ ಹೊಸಪೇಟೆ**

ತಾಲೂಕಿನ ನಾಗೇನಹಳ್ಳಿಯ ವಿವಿದೋದ್ದೇಶ ಪ್ರಾಥಮಿಕ ಗ್ರಾಮೀಣ ಕೃಷಿ ಸಹಕಾರ ಸಂಘ ನಿಯಮಿತದ ಶತಮಾನೋತ್ಸವ ಸಂಭ್ರಮಾಚರಣೆ ಅ.6 ರಂದು ಭಾನುವಾರ ಗ್ರಾಮದ ಸರ್ಕಾರಿ ಶಾಲೆ ಆವರಣದಲ್ಲಿ ಆಯೋಜಿಸಿಲಾಗಿದೆ. ನಾಗೇನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸರ್ವರೂ ಶತಮಾನೋತ್ಸವದಲ್ಲಿ ಪಾಲ್ಗೊಂಡು ಯಶಸ್ವಿಗೊಳಿಸಬೇಕೆಂದು ಸಂಘದ ಅಧ್ಯಕ್ಷ ಸಿ.ಆಶ್ಯಾಂ ಮನವಿ ಮಾಡಿದರು.

ನಾಗೇನಹಳ್ಳಿ ಗ್ರಾಮದ ಕೃಷಿ ಸಹಕಾರ ಸಂಘದ ಸಭಾಂಗಣದಲ್ಲಿ ಶನಿವಾರ ಶತಮಾನೋತ್ಸವ ಆಚರಣೆಯ ಪೂರ್ವಭಾವಿ ಸಭೆ ಅಧ್ಯಕ್ಷತೆವಹಿಸಿ ಮಾತನಾಡಿದರು. ಗ್ರಾಮದಲ್ಲಿ ಶತಮಾನೋತ್ಸವ ಆಚರಿಸಿಕೊಳ್ಳುತ್ತಿರುವ ರೈತರ ಜೀವನಾಡಿ ಪ್ರಾಥಮಿಕ ಕೃಷಿ ಸಹಕಾರ ಸಂಘ ಸಾವಿರಾರು ರೈತರ ಪ್ರಗತಿಗೆ ಬೆನ್ನೆಲುಬಾಗಿ ನಿಂತು, ಸಂಘವೂ ಪ್ರಗತಿಯತ್ತ ಸಾಗಿದೆ. ಶತಮಾನೋತ್ಸವ ಕಂಡಿರುವ ಕೃಷಿ ಸಹಕಾರ ಸಂಘದ ಹಿಂದೆ ಅನೇಕ ಹಿರಿಯರ ಪರಿಶ್ರಮವಿದೆ. ಎಲ್ಲರ ಸಹಕಾರದೊಂದಿಗೆ ಅತ್ಯುತ್ತಮವಾಗಿ ಆಯೋಜಿಸಲಾಗುತ್ತಿದ್ದು, ಗ್ರಾಪಂ ಸದಸ್ಯರು, ಅಧಿಕಾರಿಗಳು, ಸಿಬ್ಬಂದಿ, ಶಾಲಾ ಶಿಕ್ಷಕರು, ಅಂಗನವಾಡಿ ಮತ್ತು ಆಶಾ ಕಾರ್ಯಕರ್ತರು ಸೇರಿದಂತೆ ಪ್ರತಿ ಮನೆಯ ಸದಸ್ಯರು ಸ್ವಯಂಪ್ರೇರಿತರಾಗಿ ನಮ್ಮೂರ ಹಬ್ಬದವೆಂದು ಪರಿಗಣಿಸಿ ಪಾಲ್ಗೊಳ್ಳಬೇಕು ಎಂದರು.

ಗ್ರಾಮದ ಮುಖಂಡರು, ಯುವಕರು, ಗ್ರಾಪಂ ಅಧ್ಯಕ್ಷರು, ಸದಸ್ಯರು, ಶಾಲಾ ಶಿಕ್ಷಕರು, ಅಂಗನವಾಡಿ ಮತ್ತು ಆಶಾ ಕಾರ್ಯಕರ್ತರು, ಆರೋಗ್ಯ ಇಲಾಖೆ ಸಿಬ್ಬಂದಿ ಸೇರಿದಂತೆ ಸಭೆಯಲಿ ಹಾಜರಿದ್ದವರು ಅಭಿಪ್ರಾಯ, ಸಲಹೆ ಮತ್ತು ಬೆಂಬಲ ಸೂಚಿಸಿದರು.

ಗ್ರಾಪಂ ಅಧ್ಯಕ್ಷ ಎಂ.ದುರುಗಪ್ಪ ಮಾತನಾಡಿ, ಗ್ರಾಮ ಪಂಚಾಯಿತಿವತಿಯಿಂದ ಸದಸ್ಯರ ಸಹಕಾರವಿರುತ್ತದೆ. ಯಾವ ಜವಾಬ್ಧಾರಿಗಳನ್ನು ನೀಡಿದರೂ ಮಾಡುತ್ತೇವೆ ಎಂದರು.

ಪಿಡಿಓ ಶಮೀಮಾಭಾನು ಮಾತನಾಡಿ, ಸ್ವಚ್ಛತೆ, ನೀರಿನ ವ್ಯವಸ್ಥೆ ಕಲ್ಪಿಸಲಾಗುವುದು ಎಂದರು.

ಸಂಘದ ನಿರ್ದೇಶಕ ಅಲ್ಲಾಭಕ್ಷಿ ಮಾತನಾಡಿ, ಎಲ್ಲರ ಅಭಿಪ್ರಾಯಗಳನ್ನು ಸ್ವೀಕರಿಸಲಾಗಿದೆ. ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನೆರವೇರಿಸಲು ಎಲ್ಲರೂ ಕೈಜೋಡಿಸಬೇಕು. ಶತಮಾನೋತ್ಸವ ಆಚರಣೆ ನಮ್ಮ ಗ್ರಾಮದ ಹಿರಿಮೆಯಾಗಿದೆ. ಅಭಿಪ್ರಾಯಗಳನ್ನು ಚರ್ಚಿಸಿ, ತೀರ್ಮಾನ ಕೈಗೊಳ್ಳಲಾಗುವುದು ಎಂದರು.

ಬಿಡಿಸಿಸಿ ಮಾಜಿ ನಿರ್ದೇಶಕ ಚಂದ್ರಶೇಖರ್ ಮಾತನಾಡಿದರು. ಮುಖಂಡರಾದ ಎಚ್.ವಿ. ಹನುಮಂತಪ್ಪ, ಕಳಕಪ್ಪ, ಕರಡಿ ತಿಮ್ಮಪ್ಪ, ಬಿ.ವೆಂಕಟೇಶ, ಪಿ.ಷಡಾಕ್ಷರ ಗೌಡ, ಹಂಪಿನಕಟ್ಟಿ ಬಸವರಾಜ, ಎಚ್.ವೈ.ಪುರೋಹಿತ, ಜಂಬಯ್ಯ, ಇತರರು ಇದ್ದರು.

# ಶಾಲೆಗೆ ಗೈರಾಗುವ ಮಕ್ಕಳಿಗಿಲ್ಲ ಉತ್ತಮ ಭವಿಷ್ಯ ಪಾಲಕರೇ ಮಕ್ಕಳನ್ನು ಶಾಲೆಗೆ ಕಳುಹಿಸಿ

## ಕಾರಿಗನೂರು ಶಾಲೆಗೆ ಗೈರಾದ ಮಕ್ಕಳ ಮನೆಗೆ ತೆರಳಿದ ಡಿಡಿಪಿಐ, ಶಿಕ್ಷಕರು



■ **ಹಂಪಿ ಟೈಮ್ಸ್ ಹೊಸಪೇಟೆ**

ಮಕ್ಕಳನ್ನು ಶಾಲೆ ಬಿಡಿಸಿ ಕೆಲಸಕ್ಕೆ ಕಳಿಸಬೇಡಿ. ಮಕ್ಕಳಿಗೆ ಶಿಕ್ಷಣ ಕೊಡಿಸಿದರೆ ಭವಿಷ್ಯದಲ್ಲಿ ಉತ್ತಮ ವ್ಯಕ್ತಿಗಳಾಗಿ ಉನ್ನತ ಸ್ಥಾನಮಾನ ಗೌರವಗಳನ್ನು ಪಡೆಯುತ್ತಾರೆ. ಅಲ್ಲದೆ ಶಿಕ್ಷಣಕ್ಕನುಗುಣವಾಗಿ ಉದ್ಯೋಗ ಪಡೆದು ಕುಟುಂಬ ಕಷ್ಟಗಳನ್ನು ಕರಗಿಸಬಲ್ಲರು. ಮಕ್ಕಳು ಶಾಲೆಗೆ ಸರಿಯಾಗಿ ಹೋಗುತ್ತಿದ್ದಾರೋ ಇಲ್ಲವೋ ಎಂಬುದನ್ನು ಪಾಲಕರು ಗಮನಿಸುತ್ತಿರಬೇಕು ಎಂದು ವಿಜಯನಗರ ಜಿಲ್ಲಾ ವಿಜಯನಗರ ಜಿಲ್ಲೆಯ ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಓ.ಆರ್.ಪ್ರಕಾಶ ಅವರು ಪಾಲಕರಿಗೆ ತಿಳಿ ಹೇಳಿದರು.

ನಗರದ ಕಾರಿಗನೂರು ಸರ್ಕಾರಿ ಪ್ರೌಢಶಾಲೆಗೆ ಶನಿವಾರ ಭೇಟಿ ನೀಡಿ, ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿ ಕುರಿತು ಶಿಕ್ಷಕರೊಂದಿಗೆ ಚರ್ಚಿಸಿದರು. ವಿಜಯನಗರ ಜಿಲ್ಲೆಯ ಎಸ್ಎಸ್ಎಲ್ಸಿ ಪರೀಕ್ಷೆಗೆ ಮಕ್ಕಳನ್ನು ಸಿದ್ಧಗೊಳಿಸುವ ಮತ್ತು ಫಲಿತಾಂಶ ಸುಧಾರಣೆಗೆ ಅಮೂಲ್ಯ ಸಲಹೆ, ಮಾರ್ಗದರ್ಶನ ಮಾಡಿದರು. ಶಾಲೆಗೆ ಪದೇ ಪದೇ ಗೈರಾಗುವ ಮಕ್ಕಳ ಮನೆಗೆ ಶಿಕ್ಷಕರೊಂದಿಗೆ ತೆರಳಿ ಪಾಲಕರು, ಮಕ್ಕಳೊಂದಿಗೆ ಸಮಾಲೋಚನೆ ನಡೆಸಿ, ಶಾಲೆಗೆ ಗೈರಾಗುವುದರಿಂದ ಭವಿಷ್ಯದಲ್ಲಿ ಎದುರಾಗಬಹುದಾದ ತೊಂದರೆಗಳು ಮತ್ತು ಶಾಲಾ ತರಗತಿಗಳಿಗೆ ನಿರಂತರವಾಗಿ ಹಾಜರಾಗಿ ಶಿಕ್ಷಕರ ಮಾರ್ಗದರ್ಶನದಲ್ಲಿ ಓದಿ, ಜ್ಞಾನಪಡೆದಾಗ ಭವಿಷ್ಯದಲ್ಲಾಗುವ ಬದಲಾವಣೆಗಳ ಕುರಿತು ಅರಿವು ಮೂಡಿಸಿದರು. ಸರ್ಕಾರಿ ಶಾಲೆಯಲ್ಲಿ ಓದುವ ಮಕ್ಕಳಿಗೆ ಶಿಕ್ಷಣ, ಊಟ, ಪುಸ್ತಕ ಸೇರಿದಂತೆ ನಾನಾ ಯೋಜನೆಗಳ ಮೂಲಕ ಅಗತ್ಯ ವಸ್ತುಗಳನ್ನು ಉಚಿತವಾಗಿ ಸರ್ಕಾರ ಒದಗಿಸುತ್ತಿದೆ. ಬಡತನ ನಿರ್ಮೂಲನೆಗೆ ಶಿಕ್ಷಣವೊಂದೇ ಮಾರ್ಗ ಎಂದರು.

ಶಾಲಾಮುಖ್ಯಗುರುಗಳಾದ ಸವಿತಾ.ಓ, ಶಿಕ್ಷಕಿಯರಾದರಾದ ನಾಗವೇಣಿ, ಕವಿತಾ ರಾಣಿ, ನೀಲಿಮಾ, ಶಿಕ್ಷಕರಾದ ಹನಮಂತಪ್ಪ ಕರಿಕಟ್ಟಿ, ಶಿವಪ್ರಸಾದ ಇದ್ದರು.

# 105 ಕೋಟಿ ರೂನಲ್ಲಿ ರಾಷ್ಟ್ರೀಯ ಹೆದ್ದಾರಿ 50ರ ವಿವಿಧೆಡೆ ಸೇತುವೆಗಳ ನಿರ್ಮಾಣಕ್ಕೆ ಸಂಸದ ರಾಜಶೇಖರ್ ಹಿಟ್ನಾಳ್ ಭೂಮಿಪೂಜೆ

**ಮೊದಲ ಪುಟದಿಂದ**

ಜನರ ಬಹುದಿನಗಳ ಬೇಡಿಕೆಯಾಗಿತ್ತು. ಅದು ಈಗ ಈಡೇರಿದೆ. ಈ ಮೂಲಕ ನಾವು ಜನರ ಬೇಡಿಕೆಗಳಿಗೆ ಸ್ಪಂದನೆ ನೀಡಿದ್ದೇವೆ ಎಂದು ತಿಳಿಸಿದರು.

ಹಿರಿಯ ಮುಖಂಡರಾದ ಕರಡಿ ಸಂಗಣ್ಣ ಅವರು ಮಾತನಾಡಿ, ರಾಷ್ಟ್ರೀಯ ಹೆದ್ದಾರಿಯ ವಿವಿಧೆಡ ಸೇತುವೆಗಳು ಆಗಬೇಕು ಎಂಬುದು ಹಲವಾರು ವರ್ಷಗಳ ಹೋರಾಟವಾಗಿತ್ತು. ಸಂಸದರಾದ ಕೆ.ರಾಜಶೇಖರ ಹಿಟ್ನಾಳ ಮತ್ತು ಶಾಸಕರಾದ ಕೆ.ರಾಘವೇಂದ್ರ ಹಿಟ್ನಾಳ ಅವರ ಸತತ ಪ್ರಯತ್ನದಿಂದಾಗಿ ಸೇತುವೆಗಳ ನಿರ್ಮಾಣ ಕಾರ್ಯಕ್ಕೆ ಚಾಲನೆ ಸಿಗುತ್ತಿರುವುದು ಕೊಪ್ಪಳದಲ್ಲಿ ಇತಿಹಾಸವಾಗಿ ಉಳಿಯಲಿದೆ ಎಂದರು. ಸಂಸದರು ಮತ್ತು ಶಾಸಕರ ಜನಪರವಾದ ಆಶಯದ ರಾಜಕೀಯದ ಇಚ್ಛಾಸಕ್ತಿಯು ಶ್ಲಾಘನೀಯವಾಗಿದೆ ಎಂದರು.

ಸಮಾರಂಭದಲ್ಲಿ ನಗರಸಭೆ ಅಧ್ಯಕ್ಷರಾದ ಅಮ್ಜದ್ ಪಟೇಲ್, ಮುಖಂಡರಾದ ಟಿ.ಜನಾರ್ಧನ, ಬಾಲಚಂದ್ರ ಮುನಿರಾಬಾದ್, ಯಂಕಪ್ಪ ಹೊಸಳ್ಳಿ, ಮಾರುತಿ ಬಗನಾಳ, ಪ್ರಸನ್ನ ಗಡಾದ, ವೆಂಕಟೇಶ ಕಂಪಸಾಗರ, ಪಾಲಾಕ್ಷಪ್ಪ ಗುಂಗಾಡಿ, ವಿಜಯಕುಮಾರ, ಶರಣಪ್ಪ ಸಜ್ಜನ, ಖಾಜಾವಲಿ ನಿಂಗಾಪುರ, ನಿಂಗನಗೌಡ ಹೊಸಳ್ಳಿ, ಶರಣಪ್ಪ ಹೊಟ್ಟಿ, ಹನುಮಂತಪ್ಪ ಲಿಂಗದಳ್ಳಿ, ಹನುಮಪ್ಪ ಕಂಪಸಾಗರ, ಭರಮಪ್ಪ ಹೊಸಳ್ಳಿ, ನಿಂಗಜ್ಜ ಶಹಾಪುರ, ಗಿರೀಶ ಹಿರೇಮಠ, ಖಾಜಾವಲಿ ಹುಲಗಿ, ತಹಸೀಲ್ದಾರ ವಿಠ್ಠಲ ಚೌಗಲಾ, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಸಮಾರಂಭದಲ್ಲಿ ಹೊಸಳ್ಳಿ, ಮುನಿರಾಬಾದ್, ಹುಲಿಗಿ, ಹಿಟ್ನಾಳ, ಅಗಳಕೇರಾ, ಶಿವಪುರ ಮತ್ತು ಬೇವಿನಹಳ್ಳಿ ಗ್ರಾಮ ಪಂಚಾಯಿತಿಯ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಸರ್ವ ಸದಸ್ಯರು ಉಪಸ್ಥಿತರಿದ್ದರು.

ಮಂಜುನಾಥ ಕಟ್ಟಿ ಸ್ವಾಗತಿಸಿದರು. ಹೊಸ ಲಿಂಗಾಪುರ ಗ್ರಾಮದ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿನಿಯರು ಪ್ರಾರ್ಥಿಸಿ ದರು. ಸಂಪ್ರಿತ ಅರಕೇರಿ ಅವರು ಸ್ವಾಗತ ಗೀತೆ ಹೇಳಿದರು. ಸಮಾರಂಭದಲ್ಲಿ ಹೊಸಲಿಂಗಾಪುರ, ಹೊಸಳ್ಳಿ, ಮುನಿರಾಬಾದ್, ಹುಲಿಗಿ, ಹಿಟ್ನಾಳ, ಅಗಳಕೇರಾ, ಶಿವಪುರ ಮತ್ತು ಬೇವಿನಹಳ್ಳಿ ಮತ್ತು ಇನ್ನಿತರ ಗ್ರಾಮಸ್ಥರು ಹಾಜರಿದ್ದರು.

# SSLC ಈ ಬಾರಿ ಫಲಿತಾಂಶ ನಮ್ಮದೆ ಹೈ ಸ್ಕೋರ್‌ಗೆ ಈಗಿಂದಲೇ ಅಭ್ಯಾಸ ಮಾಡಿ

Hampi Times Margadarshi
ಮನಸ್ಸು ಮಾಡು – ಕರ್ತವ್ಯ ನಿಷ್ಠನಾಗು – ಕಾದು ನೋಡು
ಹಂಪಿ ಟೈಮ್ಸ್ ಇ–ಪೇಪರ್‌ಗಾಗಿ ಭೇಟಿ ನೀಡಿ: https://epaper.hampitimes.com

ಹಂಪಿ ಟೈಮ್ಸ್ ಮಾರ್ಗದರ್ಶಿ SSLC: ಸಮಾಜ ವಿಜ್ಞಾನ

## ಭೂಗೋಳ ಶಾಸ್ತ್ರ ಅಧ್ಯಾಯ:14 ಭಾರತದ ಜಲಸಂಪನ್ಮೂಲಗಳು

| | |
|---|---|
| ಪಶ್ಚಿಮ ಬಂಗಾಳದ ಕಣ್ಣೀರಿನ ನದಿ | ದಾಮೋದರ ನದಿ |
| ಬಿಹಾರದ ಕಣ್ಣೀರಿನ ನದಿ | ಕೋಸಿ ನದಿ |
| ಒಡಿಸ್ಸಾದ ಕಣ್ಣೀರಿನ ನದಿ | ಮಹಾನದಿ |

**1) ನೀರಾವರಿ ಎಂದರೇನು?**
**ಉತ್ತರ:–** ವ್ಯವಸಾಯ ಭೂಮಿಗೆ ಕೃತಕವಾಗಿ ಕಾಲುವೆ, ಬಾವಿ, ಕೆರೆಗಳ ಮೂಲಕ ನೀರನ್ನು ಒದಗಿಸುವುದು

**2) ಮಳೆಕೊಯ್ಲು ಎಂದರೇನು?**
**ಉತ್ತರ:–** ಮಳೆ ನೀರನ್ನು ಸಂಗ್ರಹಿಸಿ ಬಳಸುವುದನ್ನು ಮಳೆಕೊಯ್ಲು ಎನ್ನುವರು

**3) ರಾಷ್ಟ್ರೀಯ ವಿದ್ಯುತ್ ಜಾಲ ಎಂದರೇನು?**
**ಉತ್ತರ:–** ಹೆಚ್ಚುವರಿ ವಿದ್ಯುತ್ತನ್ನು ಕೊರತೆ ಇರುವ ಪ್ರದೇಶಗಳಿಗೆ ಸಾಗಿಸಲು ಇರುವ ವ್ಯವಸ್ಥೆಯನ್ನು ರಾಷ್ಟ್ರೀಯ ವಿದ್ಯುತ್ ಜಾಲ ಎನ್ನುವರು

**4) ವಿವಿಧೋದ್ದೇಶನದಿ ಕಣಿವೆ ಯೋಜನೆಯ ಉದ್ದೇಶಗಳು ಯಾವುವು ?**
**ಉತ್ತರ:–** * ನೀರಾವರಿ ಸೌಲಭ್ಯ ಒದಗಿಸುವುದು, * ಜಲವಿದ್ಯುತ್ ಶಕ್ತಿ ಉತ್ಪಾದನೆ, * ಪ್ರವಾಹ ನಿಯಂತ್ರಣ, * ನೌಕಾಯಾನ ಸೌಲಭ್ಯ ಒದಗಿಸುವುದು, * ಗೃಹಬಳಕೆ, * ಕೈಗಾರಿಕೆಗಳಿಗೆ ನೀರು ಒದಗಿಸುವುದು, * ಮೀನುಗಾರಿಕೆ ಅಭಿವೃದ್ದಿ * ಅರಣ್ಯ ಅಭಿವೃದ್ಧಿ, * ಮಣ್ಣಿನ ಸವಕಳಿ ನಿಯಂತ್ರಿಸುವುದು

**5) ಭಾರತದಲ್ಲಿ ನೀರಾವರಿಯು ಅವಶ್ಯಕ, ಏಕೆ? ಎ.2023**
**ಉತ್ತರ:–** * ನೀರಿನ ಲಭ್ಯತೆ ಪ್ರದೇಶದಿಂದ ಪ್ರದೇಶಕ್ಕೆ ವ್ಯತ್ಯಾಸವಿದೆ * ಈ ನೀರಿನ ಲಭ್ಯತೆ ಕಾಲದಿಂದ ಕಾಲಕ್ಕೆ ವ್ಯತ್ಯಾಸವಿದೆ * ಭಾರತದಲ್ಲಿ ಮಳೆಯ ಅಸಮಾನ ಹಂಚಿಕೆ ಯಾಗಿದೆ * ಮಳೆಯ ಅನಿಶ್ಚಿತತೆಯಿಂದ ಕೂಡಿದೆ * ಮಳೆಯ ಮಾರುತ ಅನಿಯತಕಾಲಿಕವಾಗಿದೆ * ಕಡಿಮೆ ಮಳೆಬೀಳುವ ಪ್ರದೇಶದಲ್ಲಿ ನೀರಾವರಿ ಅನಿವಾರ್ಯವಾಗಿದೆ.

**6) ಬಾವಿ ನೀರಾವರಿಯು ಅತಿ ಪ್ರಮುಖವಾದ ನೀರಾವರಿ ಪದ್ಧತಿಯಾಗಿದೆ. ಏಕೆ? (ಎ.2024)**
**ಉತ್ತರ:–** * ಬಾವಿ ನೀರಾವರಿಯು ಕಡಿಮೆ ಮಳೆ ಬೀಳುವ ಭಾಗಗಳಲ್ಲಿ ಹೆಚ್ಚು ಉಪಯುಕ್ತವಾಗಿವೆ. * ಬಾವಿಯ ನಿರ್ಮಾಣ ಮತ್ತು ನಿರ್ವಹಣೆಯು ಸುಲಭವಾಗಿದೆ. * ಕೆರೆ ಮತ್ತು ಕಾಲುವೆ ನೀರಾವರಿ ಸೌಲಭ್ಯವಿಲ್ಲದ ಭಾಗಗಳಲ್ಲಿ ಬಾವಿ ನೀರಾವರಿ ಅವಶ್ಯಕವಾಗಿದೆ.

| | |
|---|---|
| ಭಾರತದ ಅತ್ಯಂತ ಎತ್ತರವಾದ ಆಣೆಕಟ್ಟು | ತೆಹ್ರಿ ಆಣೆಕಟ್ಟು |
| ಭಾರತದಲ್ಲಿ ಅತ್ಯಂತ ಉದ್ದವಾದ ಆಣೆಕಟ್ಟು | ಹಿರಾಕುಡ್ |
| ಸ್ವತಂತ್ರ ಭಾರತದ ಮೊದಲ ನದಿ ಕಣಿವೆ ಯೋಜನೆ | ದಾಮೋದರ ನದಿಕಣಿವೆ ಯೋಜನೆ |
| ಕರ್ನಾಟಕದ ಅತಿ ದೊಡ್ಡ ನದಿ ಕಣಿವೆ ಯೋಜನೆ | ಕೃಷ್ಣ ಮೇಲ್ದಂಡೆ ಯೋಜನೆ |

| ಆಣೆಕಟ್ಟುಗಳು | ನಿರ್ಮಿಸಲಾದ ನದಿಗಳು |
|---|---|
| ದಾಮೋದರ ನದಿ ಕಣಿವೆ ಯೋಜನೆ | ದಾಮೋದರ ನದಿ |
| ಭಾಕ್ರ ನಂಗಲ್ ಯೋಜನೆ | ಸಟ್ಲೆಜ್ ನದಿ |
| ಕೋಶಿ ಯೋಜನೆ | ಕೋಶಿ ನದಿ |
| ಹಿರಾಕುಡ್ ಯೋಜನೆ | ಮಹಾನದಿ |
| ತುಂಗಭದ್ರ ಯೋಜನೆ | ತುಂಗಭದ್ರ ನದಿ |
| ನಾಗಾರ್ಜುನ ಸಾಗರ ಯೋಜನೆ | ಕೃಷ್ಣ ನದಿ |
| ನರ್ಮದಾ ಯೋಜನೆ | ನರ್ಮದಾ |
| ಕೃಷ್ಣ ಮೇಲ್ದಂಡೆ ಯೋಜನೆ | ಕೃಷ್ಣ ನದಿ |
| **ಜಲಾಶಯ** | **ಮತ್ತೊಂದು ಹೆಸರು** |
| ಭಾಕ್ರ ಜಲಾಶಯ | ಗೋವಿಂದಸಾಗರ |
| ತುಂಗಭದ್ರ ಜಲಾಶಯ | ಪಂಪಸಾಗರ |
| ಆಲಮಟ್ಟಿ ಜಲಾಶಯ | ಲಾಲ್ ಬಹದ್ದೂರ್ ಶಾಸ್ತ್ರೀ |
| ನಾರಾಯಣಪುರ ಜಲಾಶಯ | ಬಸವಸಾಗರ |

**ಭಾರತದ ಪ್ರಮುಖ ನದಿ ಕಣಿವೆ ಯೋಜನೆಗಳು**




ನಕಾಶೆ ಮತ್ತು ಗರುತಿಸುವಿಕೆಗೆ 5 ಅಂಕವಿರುತ್ತದೆ. ಹೆಚ್ಚು ಗಮನಿಸಿ

www.hampitimes.com - Hampi Times Margadarshi

ಮಾರ್ಗದರ್ಶಿ ಶಿಕ್ಷಕರು : ಕೊಟ್ರೇಶ್ ಮಾಳಿಗಿ, ಸಮಾಜ ವಿಜ್ಞಾನ ಶಿಕ್ಷಕರು, ಬ್ಯಾಸಿಗಿದೇರಿ, ಹ.ಬೊ.ಹಳ್ಳಿ (ತಾ) ವಿಜಯನಗರ (ಜಿಲ್ಲೆ)

ಕ.ರಾ.ಮಕ್ಕಳ ಸಾಹಿತ್ಯ ಪರಿಷತ್, ವಿಜಯನಗರ ಜಿಲ್ಲೆ

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055